Re. · No.D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

( EXTRAORDINARY )

( ವಿಶೇಷ ಸಂಚಿಕೆ )

| | |
|---|---|
| भाग IX | अनुभाग 1 |
| PART IX | SECTION 1 |
| ಭಾಗ IX | ವಿಭಾಗ 1 |

प्राधिकार से प्रकाशित

Published by Authority

ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.

| | | |
|---|---|---|
| सं–1 नई दिल्ली, सोमवार, मे 5 -1997 | वैशाख 15, 1919 (शक) | खन्ड–16 |
| No. 1 New Delhi, Monday, May 5, 1997 | Vaishakha 15, 1919 (Saka) | Vol. 16 |
| ಸಂಖ್ಯೆ ೧ ನವದೆಹಲಿ, ಸೋಮವಾರ, ಮೇ ೫, ೧೯೯೭ | ವೈಶಾಖ ೧೫, ೧೯೧೯ (ಶಕ) | ಸಂಪುಟ ೧೬ |


## Ministry of Law, Justice & Company Affairs

(Legislative Department)

New Delhi, December 25, 1995

ಕಾನೂನು, ನ್ಯಾಯ ಮತ್ತು ಕಂಪನಿ ವ್ಯವಹಾರಗಳ ಮಂತ್ರಾಲಯ

(ವಿಧಾಯೀ ಇಲಾಖೆ)

ನವದೆಹಲಿ, 25ನೇ ಡಿಸೆಂಬರ್ 1995

The Translation in Kannada of the following Acts, namely—(1) The Employers Liability Act, 1938 (2) The Drugs (Control) Act, 1950 (3) The Weekly Holiday Act, 1942 (4) The All India Council for Technical Education Act, 1987 (5) The Hindu Succession Act, 1956 (6) The Additional Duties of Excise (Textiles and Textile Articles) Act, 1978 (7) The Bureau of Indian Standerds Act, 1986 (8) The Provident Funds Act, 1925 and (9) The Indian Divorce Act, 1869 are hereby published under the authority of the President and shall be deemed to be authoritative texts thereof in Kannada under clause (a) of Section (2) of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು, ಎಂದರೆ—(1) ನಿಯೋಜಕ ಹೊಣೆಗಾರಿಕೆ ಅಧಿನಿಯಮ, 1938 (2) ಔಷಧ (ನಿಯಂತ್ರಣ) ಅಧಿನಿಯಮ, 1950 (3) ವಾರದ ರಜಾ ದಿನ ಅಧಿನಿಯಮ, 1942 (4) ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ಅಧಿನಿಯಮ, 1987 (5) ಹಿಂದೂ ಉತ್ತರಾಧಿಕಾರ ಅಧಿನಿಯಮ, 1956 (6) ಅಧಿಕ ಉತ್ಪಾದನಾ ಶುಲ್ಕ (ಜವಳಿ ಮತ್ತು ಜವಳಿ ವಸ್ತು) ಅಧಿನಿಯಮ, 1978 (7) ಭಾರತೀಯ ಮಾನಕ ಸಂಸ್ಥೆ ಅಧಿನಿಯಮ, 1986 (8) ಭವಿಷ್ಯ ನಿಧಿ ಅಧಿನಿಯಮ, 1925 ಮತ್ತು (9) ಭಾರತ ವಿವಾಹ ವಿಚ್ಛೇದನ ಅಧಿನಿಯಮ, 1869– ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973ರ (1973ರ 50) 2ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಈ ಅಧಿನಿಯಮಗಳ ಕನ್ನಡ ಪಾಠವೆಂದು ಭಾವಿಸತಕ್ಕದು.

# ಹಿಂದೂ ಉತ್ತರಾಧಿಕಾರ ಅಧಿನಿಯಮ, 1956

(17ನೇ ಜೂನ್ 1956)

(1956ರ 30)

ಹಿಂದೂಗಳಲ್ಲಿ ಮರಣ ಶಾಸನ ರಹಿತ ಉತ್ತರಾಧಿಕಾರಕ್ಕೆ ಸಂಬಂಧಿಸಿದ ಕಾನೂನನ್ನು ತಿದ್ದುಪಡಿ ಮಾಡುವ ಮತ್ತು ಕ್ರೋಢೀಕರಿಸುವ ಅಧಿನಿಯಮ.

ಭಾರತ ಗಣರಾಜ್ಯದ ಏಳನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿಸಲಾಗಿದೆ :—

## ಅಧ್ಯಾಯ-I

### ಪ್ರಾರಂಭಿಕ

**1. ಚಿಕ್ಕ ಹೆಸರು ಮತ್ತು ವ್ಯಾಪ್ತಿ.**—(1) ಈ ಅಧಿನಿಯಮವನ್ನು ಹಿಂದೂ ಉತ್ತರಾಧಿಕಾರ ಅಧಿನಿಯಮ, 1956 ಎಂದು ಕರೆಯತಕ್ಕದ್ದು.

(2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನುಳಿದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

**2. ಅಧಿನಿಯಮದ ಅನ್ವಯ.**—(1) ಈ ಅಧಿನಿಯಮವು,-

(ಕ) ವೀರಶೈವ, ಲಿಂಗಾಯಂತ ಅಥವಾ ಬ್ರಹ್ಮೊ, ಪ್ರಾರ್ಥನಾ ಅಥವಾ ಆರ್ಯ ಸಮಾಜದ ಅನುಯಾಯಿಯನ್ನು ಒಳಗೊಂಡ ಯಾವುದೇ ರೂಪ ಅಥವಾ ವಿಕಾಸಗಳು ಕೂಡಿರುವ ಹಿಂದೂ ಮತದ ಯಾವನೇ ವ್ಯಕ್ತಿಗೆ,

(ಖ) ಬೌದ್ಧ, ಜೈನ ಅಥವಾ ಸಿಖ್ಖ ಮತದ ಯಾವನೇ ವ್ಯಕ್ತಿಗೆ, ಮತ್ತು

(ಗ) ಈ ಅಧಿನಿಯಮವು ಅನುಮೋದಿತವಾಗಿರದಿದ್ದರೆ ಇಲ್ಲಿ ಹೇಳಿದ ಯಾವುದೇ ವಿಷಯಗಳ ಬಗ್ಗೆ ಅವನು ಹಿಂದೂ ಕಾನೂನಿಗೆ ಅಥವಾ ಅಂಥ ಕಾನೂನಿನ ಭಾಗವಾಗಿರುವ ಯಾವುದೇ ರೂಢಿಗೆ ಅಥವಾ ಆಚರಣೆಗೆ ಒಳಪಡುತ್ತಿದ್ದಿಲ್ಲವೆಂದು ರುಜುವಾತು ಪಡಿಸಿದ ಹೊರತು ಮುಸ್ಲಿಮ್, ಕ್ರೈಸ್ತ, ಪಾರ್ಸಿ ಅಥವಾ ಯಹೂದಿ ಮತದವನಲ್ಲದ ಯಾವನೇ ಇತರ ವ್ಯಕ್ತಿಗೆ

-ಅನ್ವಯಿಸುತ್ತದೆ.

ವಿವರಣೆ :—ಈ ಕೆಳಕಂಡ ವ್ಯಕ್ತಿಗಳು ಸಂದರ್ಭಾನುಸಾರ ಹಿಂದೂ, ಬೌದ್ಧ, ಜೈನ ಅಥವಾ ಸಿಖ್ಖ ಮತದವರಾಗಿರುತ್ತಾರೆ :—

(ಕ) ತಂದೆ ತಾಯಿ ಇಬ್ಬರೂ ಹಿಂದೂ, ಬೌದ್ಧ, ಜೈನ ಅಥವಾ ಸಿಖ್ಖ ಮತದವರಾಗಿದ್ದು ಅವರ ಯಾವುದೇ ಔರಸ ಅಥವಾ ಅನೌರಸ ಮಗು :

(ಖ) ತಂದೆ ತಾಯಿಗಳಲ್ಲೊಬ್ಬರು ಹಿಂದೂ, ಬೌದ್ಧ, ಜೈನ ಅಥವಾ ಸಿಖ್ಖ ಮತದವರಾಗಿದ್ದು, ಅಂಥ ತಂದೆ ಅಥವಾ ತಾಯಿಯು ಸೇರಿರುವ ಅಥವಾ ಸೇರಿದ್ದ ತಂಡದ, ಜನಾಂಗದ, ಗುಂಪಿನ ಅಥವಾ ಕುಟುಂಬದ ವ್ಯಕ್ತಿಯಂತೆ ಬೆಳೆದು ಬಂದ ಯಾವುದೇ ಔರಸ ಅಥವಾ ಅನೌರಸ ಮಗು ;

(ಗ) ಹಿಂದೂ, ಬೌದ್ಧ, ಜೈನ ಅಥವಾ ಸಿಖ್ಖ ಆಗಿ ಮತಾಂತರಿತನಾದ ಅಥವಾ ಪುನರ್ ಮತಾಂತರಿತನಾದ ಯಾವನೇ ವ್ಯಕ್ತಿ.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಕೇಂದ್ರ ಸರಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅನ್ಯಥಾ ನಿರ್ದೇಶಿಸಿದ ಹೊರತು, ಸಂವಿಧಾನದ 366ನೇ ಅನುಚ್ಛೇದದ (25)ನೇ ಖಂಡದ ಅರ್ಥ ವ್ಯಾಪ್ತಿಯೊಳಗೆ ಬರುವ ಯಾವುದೇ ಅನುಸೂಚಿತ ಬುಡಕಟ್ಟಿನವರಿಗೆ ಈ ಅಧಿನಿಯಮದಲ್ಲಿರುವುದು ಯಾವುದೂ ಅನ್ವಯಿಸತಕ್ಕದ್ದಲ್ಲ.

(3) ಈ ಅಧಿನಿಯಮದ ಯಾವುದೇ ಭಾಗದಲ್ಲಿ ಬರುವ "ಹಿಂದೂ" ಎಂಬ ಪದವನ್ನು ಮತದಿಂದ ಹಿಂದೂ ಆಗಿರದಿದ್ದರೂ ಈ ಪ್ರಕರಣದಲ್ಲಿರುವ ಉಪಬಂಧಗಳ ಆಧಾರದ ಮೇಲೆ ಈ ಅಧಿನಿಯಮವು ಅನ್ವಯಿಸುವ ವ್ಯಕ್ತಿಯನ್ನು ಅದು ಒಳಗೊಳ್ಳುತ್ತದೆ ಎಂಬಂತೆ ಅರ್ಥ ಮಾಡತಕ್ಕದ್ದು.

**3. ಪರಿಭಾಷೆಗಳು ಮತ್ತು ಅರ್ಥ ವಿವರಣೆಗಳು.**—(1) ಈ ಅಧಿನಿಯಮದಲ್ಲಿ ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ,—

(ಕ) "ಗೋತ್ರಜ" ಎಂದರೆ ಇಬ್ಬರು ಸಂಪೂರ್ಣವಾಗಿ ಪುರುಷ ಪರಂಪರೆಯಲ್ಲಿ ರಕ್ತದಿಂದ ಅಥವಾ ದತ್ತಕದ ಮೂಲಕ ಸಂಬಂಧಿಗಳಾಗಿದ್ದರೆ ಒಬ್ಬನು ಮತ್ತೊಬ್ಬನ "ಗೋತ್ರಜ" ಎಂದು ಹೇಳಲಾಗುತ್ತದೆ;

(ಖ) "ಅಳಿಯ ಸಂತಾನ ಕಾನೂನು" ಎಂದರೆ, ಈ ಅಧಿನಿಯಮವು ಅನುಮೋದಿತವಾಗಿರದಿದ್ದರೆ, ಮದ್ರಾಸ್ ಅಳಿಯ ಸಂತಾನ ಅಧಿನಿಯಮ, 1949ಕ್ಕೆ ಅಥವಾ ಈ ಅಧಿನಿಯಮದಲ್ಲಿ ಉಪಬಂಧಿಸಿರುವ ವಿಷಯಗಳ ಬಗ್ಗೆ ರೂಢಿಗತವಾದ ಅಳಿಯ ಸಂತಾನ ಕಾನೂನು ಒಳಪಡುತ್ತಿದ್ದ ವ್ಯಕ್ತಿಗಳಿಗೆ ಅನ್ವಯಿಸಬಹುದಾದ ಕಾನೂನು ಪದ್ಧತಿ ;

(ಗ) "ಬಂಧು" ಎಂದರೆ ಇಬ್ಬರು ಸಂಪೂರ್ಣವಾಗಿ ಪುರುಷ ಪರಂಪರೆಯಲ್ಲಿ ಸಂಬಂಧಿಗಳಲ್ಲದೆಯೇ, ರಕ್ತದಿಂದ ಅಥವಾ ದತ್ತಕದ ಮೂಲಕ ಸಂಬಂಧಿಗಳಾಗಿದ್ದರೆ ಒಬ್ಬನು ಮತ್ತೊಬ್ಬನ "ಬಂಧು" ಎಂದು ಹೇಳಲಾಗುತ್ತದೆ;

(ಎ) "ರೂಢಿ" ಮತ್ತು "ಆಚರಣೆ" ಎಂಬ ಪದಗಳು ನಿರಂತರವಾಗಿ ಮತ್ತು ಏಕ ಪ್ರಕಾರವಾಗಿ ದೀರ್ಘಕಾಲ ಅನುಸರಿಸಲ್ಪಟ್ಟ ಕಾರಣದಿಂದ ಯಾವುದೇ ಸ್ಥಳೀಯ ಪ್ರದೇಶ, ಬುಡಕಟ್ಟು, ಸಮುದಾಯ, ಗುಂಪು ಅಥವಾ ಕುಟುಂಬದಲ್ಲಿ ಹಿಂದೂಗಳೊಳಗೆ ಕಾನೂನುಬಲ ಪಡೆದಿರುವ ಯಾವುದೇ ನಿಯಮವನ್ನು ಸೂಚಿಸುತ್ತದೆ:

ಪರಂತು, ಆ ನಿಯಮವು ನಿಶ್ಚಿತವಾದುದು ಮತ್ತು ಅಯುಕ್ತವಲ್ಲದ್ದು ಅಥವಾ, ಸಾರ್ವಜನಿಕ ನೀತಿಗೆ ವಿರುದ್ಧವಲ್ಲದ್ದು ಆಗಿರಬೇಕು ; ಮತ್ತು

ಮತ್ತೂ ಪರಂತು, ಒಂದು ಕುಟುಂಬಕ್ಕೆ ಮಾತ್ರ ಅನ್ವಯಿಸಬಹುದಾದ ನಿಯಮದ ಸಂದರ್ಭದಲ್ಲಿ ಆ ಕುಟುಂಬದಿಂದ ಅದು ತ್ಯಜಿಸಲ್ಪಡದಿರಬೇಕು ;

(ಬಿ) "ಪೂರ್ಣ ರಕ್ತ", "ಭಿನ್ನ ರಕ್ತ" ಮತ್ತು "ಏಕೋದರ ರಕ್ತ"—

(i) ಒಬ್ಬ ಪೂರ್ವಜನಿಂದ ಒಬ್ಬಳೇ ಹೆಂಡತಿಯಲ್ಲಿ ಜನಿಸಿದ ಇಬ್ಬರು ಪರಸ್ಪರವಾಗಿ ಪೂರ್ಣ ರಕ್ತ ಬಾಂಧವ್ಯವುಳ್ಳವರೆಂದೂ ಮತ್ತು ಒಬ್ಬ ಪೂರ್ವಜನಿಂದ ಬೇರೆ ಬೇರೆ ಹೆಂಡತಿಯರಲ್ಲಿ ಜನಿಸಿದ ಇಬ್ಬರು ಪರಸ್ಪರವಾಗಿ ಭಿನ್ನರಕ್ತ ಬಾಂಧವ್ಯವುಳ್ಳವರೆಂದು ಹೇಳಲಾಗುತ್ತದೆ ;

(ii) ಒಬ್ಬಳೇ ಪೂರ್ವಜೆಗೆ ಬೇರೆ ಬೇರೆ ಗಂಡಂದಿರಿಂದ ಇಬ್ಬರು ಜನಿಸಿರುವಾಗ ಅವರು ಪರಸ್ಪರವಾಗಿ ಏಕೋದರ ರಕ್ತ ಬಾಂಧವ್ಯವುಳ್ಳವರು ಎಂದು ಹೇಳಲಾಗುತ್ತದೆ;

ವಿವರಣೆ.—ಈ ಖಂಡದಲ್ಲಿ "ಪೂರ್ವಜ" ಎಂಬಲ್ಲಿ ತಂದೆಯೂ, "ಪೂರ್ವಜೆ" ಎಂಬಲ್ಲಿ ತಾಯಿಯೂ ಸೇರಿರುತ್ತಾರೆ ;

(ಸಿ) "ವಾರಸುದಾರ" ಎಂದರೆ ಈ ಅಧಿನಿಯಮದ ಮೇರೆಗೆ ಮರಣ ಶಾಸನರಹಿತವಾದ ಸ್ವತ್ತಿಗೆ ಉತ್ತರಾಧಿಕಾರಿಯಾಗಲು ಹಕ್ಕುಳ್ಳ ಪುರುಷ ಅಥವಾ ಸ್ತ್ರೀ ವ್ಯಕ್ತಿ ;

(ಡಿ) "ಮರಣ ಶಾಸನ ರಹಿತ"—ಯಾವನೇ ವ್ಯಕ್ತಿಯು ಒಂದು ಸ್ವತ್ತಿನ ಬಗ್ಗೆ ಪರಿಣಾಮವನ್ನುಂಟು ಮಾಡುವ ಸಾಮರ್ಥ್ಯವುಳ್ಳ ಮರಣ ಶಾಸನ ಮೂಲಕವಾದ ವಿಲೆಯನ್ನು ಮಾಡದಿದ್ದರೆ, ಅವನು ಅಥವಾ ಅವಳು ಮರಣ ಶಾಸನ ಮಾಡದೆ ಸತ್ತುಹೋಗಿದ್ದಾನೆ/ಳೆ ಎಂದು ಭಾವಿಸಲಾಗುತ್ತದೆ ;

(ಇ) "ಮರುಮಕ್ಕತ್ತಾಯಮ್ ಕಾನೂನು" ಎಂದರೆ—

(ಕ) ಈ ಅಧಿನಿಯಮವು ಅನುಮೋದಿತವಾಗಿರದಿದ್ದರೆ, ಈ ಅಧಿನಿಯಮದಲ್ಲಿ ಉಪಬಂಧಿಸಿರುವ ವಿಷಯಗಳ ಸಂಬಂಧದಲ್ಲಿ, ಮದ್ರಾಸು ಮರುಮಕ್ಕತ್ತಾಯಮ್ ಅಧಿನಿಯಮ, 1932, ತಿರುವಾಂಕೂರು ನಾಯರ್ ಅಧಿನಿಯಮ ; ತಿರುವಾಂಕೂರು ಈಜವಾ ಅಧಿನಿಯಮ ; ತಿರುವಾಂಕೂರು ನಂಜನಾಡ ವೆಲ್ಲಾಲ ಅಧಿನಿಯಮ ; ತಿರುವಾಂಕೂರು ಕ್ಷತ್ರಿಯ ಅಧಿನಿಯಮ ; ತಿರುವಾಂಕೂರು ಕೃಷ್ಣವಕ ಮರುಮಕ್ಕತಾಯೀ ಅಧಿನಿಯಮ ; ಕೊಚ್ಚಿನ್ ಮರುಮಕ್ಕತ್ತಾಯಮ್ ಅಧಿನಿಯಮ ; ಅಥವಾ ಕೊಚ್ಚಿನ್ ನಾಯರ್ ಅಧಿನಿಯಮಗಳಿಗೆ ಒಳಪಡುತ್ತಿದ್ದಿರಬಹುದಾದ ವ್ಯಕ್ತಿಗಳಿಗೆ ; ಅಥವಾ

(ಖ) ಹೆಚ್ಚಾಗಿ ತಿರುವಾಂಕೂರು, ಕೊಚ್ಚಿನ್ ಅಥವಾ ಮದ್ರಾಸು ರಾಜ್ಯದಲ್ಲಿ 1956ರ ನವೆಂಬರ್ 1ಕ್ಕೆ ನಿಕಟ ಪೂರ್ವದಲ್ಲಿ ಅದು ಅಸ್ತಿತ್ವದಲ್ಲಿದ್ದಂತೆ ಅಧಿವಾಸಿಸಿದ ಯಾವುದೇ ಸಮುದಾಯಕ್ಕೆ ಸೇರಿದ ಮತ್ತು ಈ ಅಧಿನಿಯಮವು ಅನುಮೋದಿತವಾಗಿರದಿದ್ದರೆ, ಈ ಅಧಿನಿಯಮದಲ್ಲಿ ಉಪಬಂಧಿಸಿರುವ ವಿಷಯಗಳ ಸಂಬಂಧದಲ್ಲಿ, ಸ್ತ್ರೀ ಪರಂಪರೆಯಲ್ಲಿ ಸಂತತಿಯನ್ನು ಪರಿಗಣಿಸುವ ಯಾವುದೇ ವಾರಸು ಪದ್ಧತಿಗೆ ಒಳಪಡುತ್ತಿದ್ದಿರಬಹುದಾದ ವ್ಯಕ್ತಿಗಳಿಗೆ

—ಅನ್ವಯಿಸಬಹುದಾದ ಕಾನೂನು ಪದ್ಧತಿ ;

ಆದರೆ, ಇದು ಅಳಿಯ ಸಂತಾನ ಕಾನೂನನ್ನು ಒಳಗೊಳ್ಳುವುದಿಲ್ಲ;

(ಎಫ್) "ನಂಬೂದ್ರಿ ಕಾನೂನು" ಎಂದರೆ ಈ ಅಧಿನಿಯಮವು ಅನುಮೋದಿತವಾಗಿರದಿದ್ದರೆ, ಈ ಅಧಿನಿಯಮದಲ್ಲಿ ಉಪಬಂಧಿಸಿರುವ ವಿಷಯಗಳ ಸಂಬಂಧದಲ್ಲಿ, ಮದ್ರಾಸು ನಂಬೂದ್ರಿ ಅಧಿನಿಯಮ, 1932; ಕೊಚಿನ್ ನಂಬೂದ್ರಿ ಅಧಿನಿಯಮ; ಅಥವಾ ತಿರುವಾಂಕೂರು ಮಲಯಾಳ ಬ್ರಾಹ್ಮಣ ಅಧಿನಿಯಮಗಳಿಗೆ ಒಳಪಡುತ್ತಿದ್ದಿರಬಹುದಾದ ವ್ಯಕ್ತಿಗಳಿಗೆ ಅನ್ವಯಿಸಬಹುದಾದ ಕಾನೂನು ಪದ್ಧತಿ;

(ಜಿ) "ಸಂಬಂಧಿತ" ಎಂದರೆ ಔರಸ ರಕ್ತ ಸಂಬಂಧದ ಮೂಲಕ ಸಂಬಂಧಿತರು;

ಪರಂತು, ಅನೌರಸ ಮಕ್ಕಳು ತಮ್ಮ ತಾಯಿಗೆ ಮತ್ತು ತಮ್ಮಲ್ಲಿ ಒಬ್ಬರೊಬ್ಬರಿಗೆ ಸಂಬಂಧಿತರೆಂದು ಭಾವಿಸಲ್ಪಡತಕ್ಕುದು ಮತ್ತು ಅವರ ಕಾನೂನು ಸಮ್ಮತ ವಂಶಜರು ಅವರಿಗೆ ಮತ್ತು ತಮ್ಮಲ್ಲಿ ಒಬ್ಬರೊಬ್ಬರಿಗೆ ಸಂಬಂಧಿತರೆಂದು ಭಾವಿಸಲ್ಪಡತಕ್ಕುದು, ಮತ್ತು ಸಂಬಂಧವನ್ನು ಅಭಿವ್ಯಕ್ತಿಸುವ ಅಥವಾ ಸಂಬಂಧಿಯನ್ನು ಸೂಚಿಸುವ ಯಾವುದೇ ಶಬ್ದವನ್ನು ಆ ಪ್ರಕಾರ ಅರ್ಥ ಮಾಡತಕ್ಕುದು.

(2) ಈ ಅಧಿನಿಯಮದಲ್ಲಿ, ಸಂದರ್ಭಕ್ಕೆ ಬೇರೆ ಅರ್ಥದ ಆಗತ್ಯವಿರದಿದ್ದರೆ, ಪುಲ್ಲಿಂಗಾರ್ಥ ಶಬ್ದಗಳು ಸ್ತ್ರೀಯರನ್ನು ಒಳಗೊಳ್ಳುವುವೆಂದು ಗ್ರಹಿಸತಕ್ಕುದಲ್ಲ.

4. ಅಧಿನಿಯಮದ ಅಧ್ಯಾರೋಹಿ ಪ್ರಭಾವ.—(1) ಈ ಅಧಿನಿಯಮದಲ್ಲಿ ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿರುವುದನ್ನುಳಿದು.—

(ಕ) ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟ ಪೂರ್ವದಲ್ಲಿ ಜಾರಿಯಲ್ಲಿದ್ದ ಹಿಂದೂ ಕಾನೂನಿನ ಯಾವುದೇ ಶಾಸ್ತ್ರವಾಕ್ಯ, ನಿಯಮ, ಅಥವಾ ಅರ್ಥ ವಿವರಣೆಯು ಅಥವಾ ಅಂಥ ಕಾನೂನಿನ ಭಾಗವಾಗಿರುವ ಯಾವುದೇ ರೂಢಿ ಅಥವಾ ಆಚರಣೆಯು, ಈ ಅಧಿನಿಯಮದಲ್ಲಿ ಉಪಬಂಧಿಸಲಾದ ಯಾವುದೇ ವಿಷಯದ ಬಗ್ಗೆ ಪರಿಣಾಮಕಾರಿಯಾಗಿರುವುದು ಕೊನೆಗೊಳ್ಳತಕ್ಕುದು;

(ಖ) ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟ ಪೂರ್ವದಲ್ಲಿ ಜಾರಿಯಲ್ಲಿದ್ದ ಯಾವುದೇ ಇತರ ಕಾನೂನು, ಈ ಅಧಿನಿಯಮದಲ್ಲಿರುವ ಯಾವುವೇ ಉಪಬಂಧಗಳಿಗೆ ಅಸಂಗತವಾಗಿರುವಷ್ಟರ ಮಟ್ಟಿಗೆ ಹಿಂದೂಗಳಿಗೆ ಅನ್ವಯವಾಗುವುದು ಕೊನೆಗೊಳ್ಳತಕ್ಕುದು.

(2) ಸಂದೇಹ ನಿವಾರಣೆಗಾಗಿ, ಈ ಅಧಿನಿಯಮದಲ್ಲಿರುವುದು ಯಾವುದೂ, ವ್ಯವಸಾಯ ಹಿಡುವಳಿಗಳ ತುಂಡೀಕರಣವನ್ನು ತಪ್ಪಿಸುವುದಕ್ಕಾಗಿ ಅಥವಾ ಪರಮಾವಧಿ ಮಿತಿಯನ್ನು ನಿಗದಿ ಮಾಡುವುದಕ್ಕಾಗಿ ಅಥವಾ ಹಿಡುವಳಿಗಳ ಬಗ್ಗೆ ಗೇಣಿಯ ಹಕ್ಕು ಪ್ರಾಪ್ತಿಗಾಗಿ ಉಪಬಂಧಿಸುವ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಂಥ ಉಪಬಂಧಗಳ ಮೇಲೆ ಪ್ರಭಾವ ಬೀರುವುದೆಂದು ಭಾವಿಸತಕ್ಕುದಲ್ಲ ಎಂದು ಈ ಮೂಲಕ ಘೋಷಿಸಲಾಗಿದೆ.

## ಅಧ್ಯಾಯ-II

### ಮರಣ ಶಾಸನರಹಿತ ಉತ್ತರಾಧಿಕಾರ

#### ಸಾಮಾನ್ಯ

**5. ಈ ಅಧಿನಿಯಮವು ಕೆಲವು ಸ್ವತ್ತುಗಳಿಗೆ ಅನ್ವಯಿಸುವುದಿಲ್ಲ.**—ಈ ಅಧಿನಿಯಮವು,-

(i) ವಿಶೇಷ ವಿವಾಹ ಅಧಿನಿಯಮ, 1954ರ 21ನೇ ಪ್ರಕರಣದ ಉಪಬಂಧಗಳ ಕಾರಣದಿಂದ, ಭಾರತ ಉತ್ತರಾಧಿಕಾರ ಅಧಿನಿಯಮ, 1925ರ ಮೂಲಕ ಉತ್ತರಾಧಿಕಾರವು ವಿನಿಯಮಿತವಾದ ಯಾವುದೇ ಸ್ವತ್ತಿಗೆ;

(ii) ಯಾವುದೇ ಭಾರತೀಯ ರಾಜ್ಯದ ರಾಜನು ಭಾರತ ಸರ್ಕಾರದೊಡನೆ ಮಾಡಿಕೊಂಡ ಯಾವುದೇ ವಿಧ್ಯುಕ್ತ ಒಡಂಬಡಿಕೆ ಅಥವಾ ಒಪ್ಪಂದದ ನಿಬಂಧನೆಗಳ ಮೂಲಕ ಅಥವಾ ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಅನುಮೋದಿತವಾದ ಯಾವುದೇ ಅಧಿನಿಯಮದ ನಿಬಂಧನೆಗಳ ಮೂಲಕ ಒಬ್ಬನೇ ವಾರಸುದಾರನಿಗೆ ಬರುವ ಯಾವುದೇ ಸಂಪದಕ್ಕೆ;

(iii) ವಲಿಯಮ್ಮ ತಂಪುರಾನ್ ಕೋವಿಲಗಮ್ ಸಂಪದಕ್ಕೆ ಮತ್ತು ಕೊಚ್ಚಿನ್ ಮಹಾರಾಜರಿಂದ ಪ್ರಖ್ಯಾಪಿತವಾದ 1949ರ ಜೂನ್ 29ನೇ ತಾರೀಖಿನ ಉದ್ಘೋಷಣೆಯ (1124ರ IX) ಮೂಲಕ ಪ್ರದತ್ತವಾದ ಅಧಿಕಾರಗಳ ಕಾರಣದಿಂದ ಅರಮನೆ ಆಡಳಿತ ಮಂಡಲಿಯಿಂದ ನಿರ್ವಹಿಸಲಾಗುತ್ತಿದ್ದ ಅರಮನೆ ನಿಧಿಗೆ

—ಅನ್ವಯಿಸತಕ್ಕುದಲ್ಲ.

**6. ದಾಯಾದಿ ಸ್ವತ್ತಿನಲ್ಲಿ ಹಿತಾಸಕ್ತಿಯ ಪ್ರಾಪ್ತಿ.**— ಈ ಅಧಿನಿಯಮದ ಪ್ರಾರಂಭದ ತರುವಾಯ ತನ್ನ ಮರಣ ಕಾಲದಲ್ಲಿ ಮಿತಾಕ್ಷರ ದಾಯಾದಿ ಸ್ವತ್ತಿನಲ್ಲಿ ಹಿತಾಸಕ್ತಿಯುಳ್ಳ ಹಿಂದೂ ಪುರುಷನು ಮೃತನಾದರೆ, ಆ ಸ್ವತ್ತಿನಲ್ಲಿಯ ಅವನ ಹಿತಾಸಕ್ತಿಯು ಬದುಕಿರುವ ದಾಯಾದಿಗಳಿಗೆ ಉತ್ತರ ಜೀವಿತಾಧಿಕಾರದ ಮೂಲಕ ಪ್ರಾಪ್ತವಾಗತಕ್ಕುದು, ಆದರೆ ಈ ಅಧಿನಿಯಮಕ್ಕನುಸಾರವಾಗಿ ಅಲ್ಲ:

ಪರಂತು, ಮೃತನು ಅನುಸೂಚಿಯ 1ನೇ ವರ್ಗದಲ್ಲಿ ನಿರ್ದಿಷ್ಟಪಡಿಸಿದ ಸ್ತ್ರೀ ಸಂಬಂಧಿಯನ್ನು ಅಥವಾ ಅಂಥ ಸ್ತ್ರೀ ಸಂಬಂಧಿಯ ಮೂಲಕ ಕ್ಲೇಮು ಮಾಡುವ ಅದೇ ವರ್ಗದಲ್ಲಿ ನಿರ್ದಿಷ್ಟಪಡಿಸಿದ ಪುರುಷ ಸಂಬಂಧಿಯನ್ನು ಉತ್ತರ ಜೀವಿಯಾಗಿ ಬಿಟ್ಟು ಹೋಗಿದ್ದರೆ, ಮಿತಾಕ್ಷರ ದಾಯಾದಿ ಸ್ವತ್ತಿನಲ್ಲಿಯ ಮೃತನ ಹಿತಾಸಕ್ತಿಯು, ಈ ಅಧಿನಿಯಮದ ಮೇರೆಗೆ ಸಂದರ್ಭಾನುಸಾರ, ಮರಣ ಶಾಸನ ಸಹಿತವಾದ ಅಥವಾ ಮರಣ ಶಾಸನ ರಹಿತವಾದ ಉತ್ತರಾಧಿಕಾರದ ಮೂಲಕ ಪ್ರಾಪ್ತವಾಗತಕ್ಕುದು, ಆದರೆ ಉತ್ತರ ಜೀವಿತಾಧಿಕಾರದ ಮೂಲಕ ಅಲ್ಲ.

ವಿವರಣೆ 1.— ಈ ಉಪಪ್ರಕರಣದ ಉದ್ದೇಶಗಳಿಗಾಗಿ, ಹಿಂದೂ ಮಿತಾಕ್ಷರ ದಾಯಾದಿ ಹಿತಾಸಕ್ತಿಯನ್ನು, ಅವನ ಮರಣಕ್ಕೆ ನಿಕಟ ಪೂರ್ವದಲ್ಲಿ ಸ್ವತ್ತಿನ ವಿಭಜನೆ ಆಗಿದ್ದಲ್ಲಿ, ಅವನು ವಿಭಜನೆಯನ್ನು ಕ್ಲೇಮು ಮಾಡಲು ಹಕ್ಕುಳ್ಳವನಾಗಿರಲಿ ಅಥವಾ ಇಲ್ಲದಿರಲಿ, ಅವನಿಗೆ ಸ್ವತ್ತಿನ ಹಂಚಿಕೆಯಲ್ಲಿ ಬರಬಹುದಾಗಿದ್ದ ಪಾಲು ಎಂಬುದಾಗಿ ಭಾವಿಸತಕ್ಕುದು.

ವಿವರಣೆ 2.— ಈ ಪ್ರಕರಣದ ಪರಂತುಕದಲ್ಲಿರುವುದು ಯಾವುದೂ, ಮೃತನ ಮರಣಕ್ಕಿಂತ ಮುಂಚೆ ದಾಯಾದಿತ್ವದಿಂದ ಪ್ರತ್ಯೇಕವಾಗಿರುವ ವ್ಯಕ್ತಿಗೆ ಅಥವಾ ಅವನ ಯಾವನೇ ವಾರಸುದಾರನಿಗೆ ಮರಣ ಶಾಸನ ರಾಹಿತ್ಯದಿಂದಾಗಿ ಅದರಲ್ಲಿ ಉಲ್ಲೇಖಿಸಿದ ಹಿತಾಸಕ್ತಿಯಲ್ಲಿ ಪಾಲನ್ನು ಕ್ಲೇಮು ಮಾಡಲು ಸಾಧ್ಯಗೊಳಿಸುವುದೆಂದು ಅರ್ಥ ಮಾಡತಕ್ಕುದಲ್ಲ.

**7. ತರವಾಡ, ತವಾಝಿ, ಕುಟುಂಬ, ಕವರು ಅಥವಾ ಇಲ್ಲಮ್‌ಗಳ ಸ್ವತ್ತಿನಲ್ಲಿಯ ಹಿತಾಸಕ್ತಿಯ ಪ್ರಾಪ್ತಿ.**—(1) ಈ ಅಧಿನಿಯಮವು ಅನುಮೋದಿತವಾಗಿರದಿದ್ದರೆ ತನ್ನ ಮರಣ ಕಾಲದಲ್ಲಿ ಸಂದರ್ಭಾನುಸಾರ, ತರವಾಡ, ತವಾಝಿ ಅಥವಾ ಇಲ್ಲಮ್‌ಗಳ ಸ್ವತ್ತಿನಲ್ಲಿ ಹಿತಾಸಕ್ತಿಯುಳ್ಳ ಮರುಮಕ್ಕತ್ತಾಯಮ್ ಅಥವಾ ನಂಬೂದಿರಿ ಕಾನೂನು ಅನ್ವಯಿಸಬಹುದಾಗಿದ್ದ ಒಬ್ಬ ಹಿಂದೂ, ಈ ಅಧಿನಿಯಮದ ಪ್ರಾರಂಭದ ತರುವಾಯ ಮೃತನಾದರೆ, ಸ್ವತ್ತಿನಲ್ಲಿಯ ಅವನ ಅಥವಾ ಅವಳ ಹಿತಾಸಕ್ತಿಯು, ಈ ಅಧಿನಿಯಮದ ಮೇರೆಗೆ, ಸಂದರ್ಭಾನುಸಾರ ಮರಣ ಶಾಸನ ಸಹಿತವಾದ ಅಥವಾ ರಹಿತವಾದ ಉತ್ತರಾಧಿಕಾರದಿಂದ ಪ್ರಾಪ್ತವಾಗತಕ್ಕುದು, ಮರುಮಕ್ಕತ್ತಾಯಮ್ ಅಥವಾ ನಂಬೂದಿರಿ ಕಾನೂನಿಗನುಸಾರವಾಗಿ ಅಲ್ಲ.

ವಿವರಣೆ.— ಈ ಉಪಪ್ರಕರಣದ ಉದ್ದೇಶಗಳಿಗಾಗಿ ತರವಾಡ, ತವಾಝಿ ಅಥವಾ ಇಲ್ಲಮ್ ಸ್ವತ್ತಿನಲ್ಲಿರುವ ಹಿಂದೂವಿನ ಹಿತಾಸಕ್ತಿಯನ್ನು ಅವನ ಅಥವಾ ಅವಳ ಮರಣಕ್ಕಿಂತ ನಿಕಟ ಪೂರ್ವದಲ್ಲಿ, ಸಂದರ್ಭಾನುಸಾರ, ಅಂಥ ತರವಾಡ, ತವಾಝಿ ಅಥವಾ ಇಲ್ಲಮ್‌ಗೆ ಸೇರಿದ್ದು ಆಗ ಬದುಕಿದ್ದ ಎಲ್ಲ ಸದಸ್ಯರಲ್ಲಿ ಆ ಸ್ವತ್ತಿನ ವ್ಯಕ್ತಿವಾರು ವಿಭಜನೆಯಾಗಿದ್ದರೆ ಅವನು ಅಥವಾ ಅವಳು ತನಗೆ ಅನ್ವಯಿಸಬಹುದಾಗಿದ್ದ ಮರುಮಕ್ಕತ್ತಾಯಮ್ ಅಥವಾ ನಂಬೂದಿರಿ ಕಾನೂನಿನ ಮೇರೆಗೆ, ಅಂಥ ವಿಭಜನೆಯನ್ನು ಕ್ಲೇಮು ಮಾಡಲು ಹಕ್ಕುಳ್ಳವನಾಗಿದ್ದರೆ/ಳಾಗಿದ್ದರೆ ಅಥವಾ ಇಲ್ಲದಿರಲಿ, ಅವನಿಗೆ ಅಥವಾ ಅವಳಿಗೆ ದೊರೆಯಬಹುದಾಗಿದ್ದ ಸಂದರ್ಭಾನುಸಾರ, ಅಂಥ ತರವಾಡ, ತವಾಝಿ ಅಥವಾ ಇಲ್ಲಮ್‌ನ ಸ್ವತ್ತಿನಲ್ಲಿರುವ ಪಾಲು ಎಂದು ಭಾವಿಸಲ್ಪಡತಕ್ಕುದು, ಮತ್ತು ಅಂಥ ಪಾಲು ಅವನಿಗೆ ಅಥವಾ ಅವಳಿಗೆ ನಿರುಪಾಧಿಕವಾಗಿ ಹಂಚಿಕೆಯಾದುದೆಂದು ಭಾವಿಸತಕ್ಕುದು.

(2) ಈ ಅಧಿನಿಯಮವು ಅನುಮೋದಿತವಾಗಿರದಿದ್ದರೆ, ಅಳಿಯ ಸಂತಾನ ಕಾನೂನು ಅನ್ವಯಿಸಬಹುದಾಗಿದ್ದ ಒಬ್ಬ ಹಿಂದೂ, ಅವನು ಅಥವಾ ಅವಳು ತನ್ನ ಮರಣ ಕಾಲದಲ್ಲಿ, ಸಂದರ್ಭಾನುಸಾರ, ಕುಟುಂಬದ ಅಥವಾ ಕವರಿನ ಸ್ವತ್ತಿನಲ್ಲಿ ಅವಿಭಕ್ತ ಹಿತಾಸಕ್ತಿಯನ್ನು ಹೊಂದಿದ್ದು ಈ ಅಧಿನಿಯಮದ ಪ್ರಾರಂಭದ ತರುವಾಯ ಮೃತನಾ/ಳಾದಾಗ ಸ್ವತ್ತಿನಲ್ಲಿಯ

ಅವನ ಅಥವಾ ಅವಳ ಹಿತಾಸಕ್ತಿಯು ಈ ಅಧಿನಿಯಮದ ಮೇರೆಗೆ ಸಂದರ್ಭಾನುಸಾರ ಮರಣ ಶಾಸನ ಸಹಿತ ಅಥವಾ ರಹಿತವಾದ ಉತ್ತರಾಧಿಕಾರದ ಪ್ರಕಾರ ಪ್ರಾಪ್ತವಾಗತಕ್ಕುದು. ಅಳಿಯ ಸಂತಾನ ಕಾನೂನಿಗನುಸಾರವಾಗಿ ಅಲ್ಲ.

ವಿವರಣೆ.— ಈ ಉಪಪ್ರಕರಣದ ಉದ್ದೇಶಗಳಿಗಾಗಿ, ಕುಟುಂಬ ಅಥವಾ ಕವರಿನಲ್ಲಿಯ ಒಬ್ಬ ಹಿಂದೂವಿನ ಹಿತಾಸಕ್ತಿಯನ್ನು ಅವನ ಅಥವಾ ಅವಳ ಮರಣಕ್ಕಿಂತ ನಿಕಟ ಪೂರ್ವದಲ್ಲಿ ಸಂದರ್ಭಾನುಸಾರ ಅಂಥ ಕುಟುಂಬ ಅಥವಾ ಕವರಿಗೆ ಸೇರಿದ್ದು, ಆಗ ಬದುಕಿದ್ದ ಎಲ್ಲ ಸದಸ್ಯರಲ್ಲಿ ಸ್ವತ್ತಿನ ವ್ಯಕ್ತಿವಾರು ವಿಭಜನೆಯಾಗಿದ್ದರೆ ಅವನು ಅಥವಾ ಅವಳು ಅಳಿಯ ಸಂತಾನ ಕಾನೂನಿನ ಮೇರೆಗೆ, ಅಂಥ ವಿಭಜನೆಯನ್ನು ಕ್ಲೇಮು ಮಾಡಲು ಹಕ್ಕುಳ್ಳವನಾ/ಳಾಗಿದ್ದಿರಲಿ ಅಥವಾ ಇಲ್ಲದಿರಲಿ ಅವನಿಗೆ ಅಥವಾ ಅವಳಿಗೆ ದೊರೆಯಬಹುದಾಗಿದ್ದ ಸಂದರ್ಭಾನುಸಾರ, ಅಂಥ ಕುಟುಂಬ ಅಥವಾ ಕವರಿನಲ್ಲಿಯ ಪಾಲು ಎಂದು ಭಾವಿಸಲ್ಪಡತಕ್ಕುದು. ಮತ್ತು ಅಂಥ ಪಾಲು ಅವನಿಗೆ ಅಥವಾ ಅವಳಿಗೆ ನಿರುಪಾಧಿಕವಾಗಿ ಹಂಚಿಕೆಯಾದುದೆಂದು ಭಾವಿಸತಕ್ಕುದು.

(3) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಒಬ್ಬ ಸ್ಥಾನಮ್‌ದಾರನು ಈ ಅಧಿನಿಯಮದ ಪ್ರಾರಂಭದ ತರುವಾಯ ಮೃತನಾದಾಗ, ಅವನು ಹೊಂದಿದ್ದ ಆ ಸ್ಥಾನಮ್ ಸ್ವತ್ತು, ಸ್ಥಾನಮ್‌ದಾರನು ಸೇರಿದ್ದ ಕುಟುಂಬದವರಿಗೆ ಮತ್ತು ಸ್ಥಾನಮ್‌ದಾರನ ವಾರಸುದಾರರಿಗೆ, ಸ್ಥಾನಮ್‌ದಾರನ ಮರಣಕ್ಕೆ ನಿಕಟಪೂರ್ವದಲ್ಲಿ ಆತನಿಗೂ ಮತ್ತು ಆಗ ಬದುಕಿದ್ದ ಆತನ ಕುಟುಂಬದ ಎಲ್ಲರಿಗೂ ಸ್ಥಾನಮ್ ಸ್ವತ್ತನ್ನು ವ್ಯಕ್ತಿವಾರು ಹಂಚಿಕೊಡಲಾಗಿದ್ದರೆ ಹೇಗೋ ಹಾಗೆ ಪ್ರಾಪ್ತವಾಗತಕ್ಕುದು. ಮತ್ತು ಆತನ ಕುಟುಂಬದವರಿಗೆ ಮತ್ತು ಆ ಸ್ಥಾನಮ್‌ದಾರನ ವಾರಸುದಾರರಿಗೆ ದೊರೆತ ಪಾಲುಗಳು ಅವರ ಪ್ರತ್ಯೇಕ ಸ್ವತ್ತಾಗಿ ಅವರಿಗೆ ಸೇರತಕ್ಕುದು.

ವಿವರಣೆ.— ಈ ಉಪಪ್ರಕರಣದ ಉದ್ದೇಶಗಳಿಗಾಗಿ, ಸ್ಥಾನಮ್‌ದಾರನ ಕುಟುಂಬವು ವಿಭಕ್ತವಾಗಿರಲಿ ಅಥವಾ ಅವಿಭಕ್ತವಾಗಿರಲಿ ಈ ಅಧಿನಿಯಮವು ಅನುಮೋದಿತವಾಗಿರದಿದ್ದರೆ, ಯಾವುದೇ ರೂಢಿ ಅಥವಾ ಆಚರಣೆಯ ಮೂಲಕ ಸ್ಥಾನಮ್‌ದಾರನ ಸ್ಥಾನಕ್ಕೆ ಉತ್ತರಾಧಿಕಾರಿಗಳಾಗಲು ಹಕ್ಕುಳ್ಳವರಾಗಬಹುದಾಗಿದ್ದ ಪುರುಷರಿಂದ ಕೂಡಿದ ಆ ಕುಟುಂಬದ ಪ್ರತಿಯೊಂದು ಶಾಖೆಯನ್ನೂ ಒಳಗೊಳ್ಳುತ್ತದೆ.

8. **ಪುರುಷರ ಸಂದರ್ಭಗಳಲ್ಲಿ ಉತ್ತರಾಧಿಕಾರದ ಸಾಮಾನ್ಯ ನಿಯಮಗಳು.**—ಮರಣ ಶಾಸನ ರಹಿತವಾಗಿ ಮೃತನಾಗುವ ಹಿಂದೂವಿನ ಸ್ವತ್ತು ಈ ಅಧ್ಯಾಯದ ಉಪಬಂಧಗಳಿಗನುಸಾರವಾಗಿ ಪ್ರಾಪ್ತವಾಗತಕ್ಕುದು:—

(ಎ) ಮೊದಲನೆಯದಾಗಿ, ಅನುಸೂಚಿಯ Iನೇ ವರ್ಗದಲ್ಲಿ ನಿರ್ದಿಷ್ಟಪಡಿಸಿದ ಸಂಬಂಧಿಗಳಾಗಿರುವ ವಾರಸುದಾರರಿಗೆ ;

(ಬಿ) ಎರಡನೆಯದಾಗಿ, Iನೇ ವರ್ಗದ ವಾರಸುದಾರನು ಇಲ್ಲದಿದ್ದರೆ, ಅನುಸೂಚಿಯ IIನೇ ವರ್ಗದಲ್ಲಿ ನಿರ್ದಿಷ್ಟಪಡಿಸಿದ ಸಂಬಂಧಿಗಳಾಗಿರುವ ವಾರಸುದಾರರಿಗೆ ;

(ಸಿ) ಮೂರನೆಯದಾಗಿ, ಈ ಎರಡು ವರ್ಗಗಳ ಯಾವನೇ ವಾರಸುದಾರನು ಇಲ್ಲದಿದ್ದರೆ, ಮೃತನ ಗೋತ್ರಜರಿಗೆ ಮತ್ತು

(ಡಿ) ಕೊನೆಯದಾಗಿ, ಗೋತ್ರಜ ಇಲ್ಲದಿದ್ದರೆ, ಮೃತನ ಬಂಧುಗಳಿಗೆ.

9. **ಅನುಸೂಚಿಯಲ್ಲಿರುವ ವಾರಸುದಾರರಲ್ಲಿ ಉತ್ತರಾಧಿಕಾರದ ಕ್ರಮ.**—ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ವಾರಸುದಾರರಲ್ಲಿ, Iನೇ ವರ್ಗದಲ್ಲಿರುವವರು ಇತರ ಎಲ್ಲ ವಾರಸುದಾರರನ್ನು ಹೊರತುಪಡಿಸಿ, ಏಕಕಾಲದಲ್ಲಿ ಉತ್ತರಾಧಿಕಾರವನ್ನು ಪಡೆದುಕೊಳ್ಳತಕ್ಕದು ; IIನೇ ವರ್ಗದ ಮೊದಲನೆಯ ನಮೂದಿನಲ್ಲಿರುವವರಿಗೆ ಎರಡನೆಯ ನಮೂದಿನಲ್ಲಿರುವವರಿಗಿಂತ ಹೆಚ್ಚು ಪ್ರಾಶಸ್ತ್ಯವಿರತಕ್ಕುದು. ಎರಡನೆಯ ನಮೂದಿನಲ್ಲಿರುವವರಿಗೆ ಮೂರನೆಯ ನಮೂದಿನಲ್ಲಿರುವವರಿಗಿಂತ ಹೆಚ್ಚು ಪ್ರಾಶಸ್ತ್ಯವಿರತಕ್ಕುದು, ಮತ್ತು ಉತ್ತರಾಧಿಕಾರವು ಇದೇ ಕ್ರಮದಲ್ಲಿ ನಡೆಯತಕ್ಕುದು.

10. **ಅನುಸೂಚಿಯ Iನೇ ವರ್ಗದಲ್ಲಿರುವ ವಾರಸುದಾರರಲ್ಲಿ ಸ್ವತ್ತಿನ ಹಂಚಿಕೆ.**—ಮರಣ ಶಾಸನರಹಿತನ ಸ್ವತ್ತು, ಅನುಸೂಚಿಯ Iನೇ ವರ್ಗದಲ್ಲಿರುವ ವಾರಸುದಾರರಿಗೆ ಈ ಕೆಳಕಂಡ ನಿಯಮಗಳಿಗನುಸಾರವಾಗಿ ಹಂಚಿಕೆಯಾಗತಕ್ಕುದು:—

ನಿಯಮ 1.—ಮರಣ ಶಾಸನರಹಿತನ ವಿಧವೆ, ಅಥವಾ ಒಬ್ಬರಿಗಿಂತ ಹೆಚ್ಚು ವಿಧವೆಯರಿದ್ದರೆ, ಎಲ್ಲ ವಿಧವೆಯರೂ ಸೇರಿ ಒಟ್ಟಾಗಿ ಒಂದು ಪಾಲು ತೆಗೆದುಕೊಳ್ಳತಕ್ಕುದು.

ನಿಯಮ 2.—ಮರಣ ಶಾಸನ ರಹಿತನ ಉತ್ತರ ಜೀವಿಗಳಾದ ಪುತ್ರರು ಮತ್ತು ಪುತ್ರಿಯರು ಮತ್ತು ತಾಯಿ ಪ್ರತಿಯೊಬ್ಬರೂ ಒಂದೊಂದು ಪಾಲು ತೆಗೆದುಕೊಳ್ಳತಕ್ಕುದು.

ನಿಯಮ 3.—ಮರಣ ಶಾಸನರಹಿತನ ಪೂರ್ವ ಮೃತನಾ/ಳಾದ ಪ್ರತಿಯೊಬ್ಬ ಪುತ್ರನ ಅಥವಾ ಪುತ್ರಿಯ ಶಾಖೆಯಲ್ಲಿಯ ವಾರಸುದಾರರು ಸೇರಿ ಒಟ್ಟಾಗಿ ಒಂದು ಪಾಲು ತೆಗೆದುಕೊಳ್ಳತಕ್ಕುದು.

ನಿಯಮ 4.—3ನೇ ನಿಯಮದಲ್ಲಿ ನಿರ್ದೇಶಿಸಿದ ಪಾಲಿನ ಹಂಚಿಕೆಯನ್ನು,—

(i) ಪೂರ್ವ ಮೃತ ಪುತ್ರನ ಶಾಖೆಯಲ್ಲಿಯ ವಾರಸುದಾರರಲ್ಲಿ, ಆತನ ವಿಧವೆ (ಅಥವಾ ವಿಧವೆಯರು ಒಟ್ಟಾಗಿ) ಮತ್ತು ಉತ್ತರ ಜೀವಿಗಳಾದ ಪುತ್ರರು ಮತ್ತು ಪುತ್ರಿಯರು ಸಮಭಾಗ ಹೊಂದುವಂತೆ ಮಾಡತಕ್ಕುದು ಮತ್ತು ಆತನ ಪೂರ್ವ ಮೃತರಾದ ಪುತ್ರರ ಶಾಖೆಯು, ಅಷ್ಟೇ ಭಾಗವನ್ನು ಹೊಂದುತ್ತದೆ ;

(ii) ಪೂರ್ವ ಮೃತಳಾದ ಪುತ್ರಿಯ ಶಾಖೆಯಲ್ಲಿಯ ವಾರಸುದಾರರಲ್ಲಿ ಉತ್ತರ ಜೀವಿಗಳಾದ ಪುತ್ರರು ಮತ್ತು ಪುತ್ರಿಯರು ಸಮಭಾಗ ಹೊಂದುವಂತೆ ಮಾಡತಕ್ಕುದು.

11. **ಅನುಸೂಚಿಯ IIನೇ ವರ್ಗದಲ್ಲಿರುವ ವಾರಸುದಾರರಲ್ಲಿ ಸ್ವತ್ತಿನ ಹಂಚಿಕೆ.**—ಮರಣ ಶಾಸನ ರಹಿತನ ಸ್ವತ್ತು IIನೇ ವರ್ಗದ ಯಾವುದೇ ಒಂದು ನಮೂದಿನಲ್ಲಿ ಉಲ್ಲೇಖಿತರಾದ ವಾರಸುದಾರರಿಗೆ, ಅವರೆಲ್ಲರೂ ಸಮಪಾಲು ಪಡೆಯುವಂತೆ ಹಂಚತಕ್ಕುದು.

**12.** ಗೋತ್ರಜರಲ್ಲಿ ಮತ್ತು ಬಂಧುಗಳಲ್ಲಿ ಉತ್ತರಾಧಿಕಾರ ಕ್ರಮ.— ಉತ್ತರಾಧಿಕಾರ ಕ್ರಮವು ಸಂದರ್ಭಾನುಸಾರ, ಗೋತ್ರಜರಲ್ಲಿ ಅಥವಾ ಬಂಧುಗಳಲ್ಲಿ ಈ ಕೆಳಗೆ ವಿಧಿಸಿದ ಪ್ರಾಶಸ್ತ್ಯ ನಿಯಮಗಳಿಗನುಸಾರವಾಗಿ ನಿರ್ಧರಿತವಾಗತಕ್ಕದು.

ನಿಯಮ 1.— ಇಬ್ಬರು ವಾರಸುದಾರರಲ್ಲಿ ಆರೋಹಣದ ಕಡಿಮೆ ಸಂಖ್ಯೆಯು ಅಥವಾ ಯಾವ ಶ್ರೇಣಿಯೂ ಇಲ್ಲದಿರುವವನಿಗೆ ಪ್ರಾಶಸ್ತ್ಯವಿರುವುದು.

ನಿಯಮ 2.— ಆರೋಹಣ ಶ್ರೇಣಿಯ ಸಂಖ್ಯೆಯು ಒಂದೇ ಆಗಿರುವಲ್ಲಿ ಅಥವಾ ಇಲ್ಲದಿರುವಲ್ಲಿ ಅವರೋಹಣ ಡಿಮೆ ಸಂಖ್ಯೆಯು ಅಥವಾ ಯಾವ ಶ್ರೇಣಿಯೂ ಇಲ್ಲದಿರುವ ವಾರಸುದಾರನಿಗೆ ಪ್ರಾಶಸ್ತ್ಯವಿರುವುದು.

ನಿಯಮ 3.— ನಿಯಮ 1 ಅಥವಾ 2ರ ಮೇರೆಗೆ ಒಬ್ಬರಿಗಿಂತ ಮತ್ತೊಬ್ಬರಿಗೆ ಪ್ರಾಶಸ್ತ್ಯ ದೊರೆಯಲು ಇಬ್ಬರಿಗೂ ಹಕ್ಕಿಲ್ಲದಿರುವಲ್ಲಿ, ಇಬ್ಬರೂ ಏಕ ಕಾಲದಲ್ಲಿ ಪಡೆದುಕೊಳ್ಳತಕ್ಕದ್ದು.

**13.** ಶ್ರೇಣಿಗಳ ಗಣನೆ.— (1) ಗೋತ್ರಜರಲ್ಲಿ ಅಥವಾ ಬಂಧುಗಳಲ್ಲಿ ಉತ್ತರಾಧಿಕಾರದ ಕ್ರಮವನ್ನು ನಿರ್ಧರಿಸುವ ಉದ್ದೇಶಕ್ಕಾಗಿ, ಮರಣ ಶಾಸನ ರಹಿತನಿಂದ, ಸಂದರ್ಭಾನುಸಾರ, ಆರೋಹಣ ಅಥವಾ ಅವರೋಹಣ ಶ್ರೇಣಿಗಳಲ್ಲಿಯ ಅಥವಾ ಎರಡೂ ಶ್ರೇಣಿಗಳ ವಾರಸುದಾರನವರೆಗೆ ಬಂಧುತ್ವವನ್ನು ಪರಿಗಣಿಸತಕ್ಕದ್ದು.

(2) ಆರೋಹಣ ಶ್ರೇಣಿಗಳನ್ನು ಮತ್ತು ಅವರೋಹಣ ಶ್ರೇಣಿಗಳನ್ನು ಮರಣ ಶಾಸನ ರಹಿತನನ್ನು ಸೇರಿಸಿಕೊಂಡೇ ಗಣಿಸತಕ್ಕದ್ದು.

(3) ಪ್ರತಿಯೊಂದು ಪೀಳಿಗೆಯೂ ಆರೋಹಣ ಅಥವಾ ಅವರೋಹಣದ ಒಂದು ಶ್ರೇಣಿಯಾಗಿರುತ್ತದೆ.

**14.** ಹಿಂದೂ ಸ್ತ್ರೀಯ ಸ್ವತ್ತು ನಿರುಪಾಧಿಕವಾಗಿ ಅವಳ ಸ್ವತ್ತಾಗಿರುವುದು.— (1) ಹಿಂದೂ ಸ್ತ್ರೀಯ ಸ್ವಾಧೀನದಲ್ಲಿರುವ ಯಾವುದೇ ಸ್ವತ್ತು, ಅದು ಈ ಅಧಿನಿಯಮದ ಪ್ರಾರಂಭಕ್ಕೆ ಪೂರ್ವದಲ್ಲಿ ಆರ್ಜಿತವಾಗಿರಲಿ ಅಥವಾ ತರುವಾಯದಲ್ಲಿ ಆರ್ಜಿತವಾಗಿರಲಿ ಅವಳು ಅದರ ಸಂಪೂರ್ಣ ಒಡೆಯಳೆಂಬಂತೆ ಅವಳ ವಶದಲ್ಲಿರತಕ್ಕದ್ದು, ಪರಿಮಿತ ಒಡೆಯಳೆಂತೆ ಅಲ್ಲ.

ವಿವರಣೆ:— ಈ ಉಪ ಪ್ರಕರಣದಲ್ಲಿ ಸ್ವತ್ತು ಎಂಬುದು ಒಬ್ಬ ಹಿಂದೂ ಸ್ತ್ರೀಯು ವಾರಸು ಅಥವಾ ಮರಣ ಶಾಸನದ ಮೂಲಕ ಅಥವಾ ವಿಭಜನೆಯಿಂದ ಅಥವಾ ಜೀವನಾಂಶದ ಅಥವಾ ಅದರ ಬಾಕಿಯ ಬದಲಾಗಿ, ಅವಳ ವಿವಾಹಕ್ಕೆ ಮುಂಚೆ, ವಿವಾಹದ ಸಮಯದಲ್ಲಿ ಅಥವಾ ತರುವಾಯ, ಅವಳ ಸಂಬಂಧಿಕನಾದ ಅಥವಾ ಆಗಿರದ ಯಾವನೇ ವ್ಯಕ್ತಿಯು ಆಕೆಗೆ ಕೊಟ್ಟ ದಾನದಿಂದ ಅಥವಾ ತನ್ನ ಕುಶಲತೆ ಅಥವಾ ಪರಿಶ್ರಮದಿಂದ, ಅಥವಾ ಕೊಳ್ಳುವ ಮೂಲಕ ಅಥವಾ ಚಿರಭೋಗದಿಂದ ಅಥವಾ ಇನ್ನಾವುದೇ ರೀತಿಯಿಂದ ಆರ್ಜಿಸಿದ ಚರ ಮತ್ತು ಸ್ಥಿರಸ್ವತ್ತು ಎರಡನ್ನೂ ಮತ್ತು ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟ ಪೂರ್ವದಲ್ಲಿ ಅವಳು ಸ್ತ್ರೀಧನವಾಗಿ ಹೊಂದಿದ್ದ ಅಂಥ ಯಾವುದೇ ಸ್ವತ್ತನ್ನು ಕೂಡ ಒಳಗೊಳ್ಳುತ್ತದೆ.

(2) (1)ನೇ ಉಪ ಪ್ರಕರಣದಲ್ಲಿರುವುದು ಯಾವುದೂ, ದಾನದ ಮೂಲಕ ಅಥವಾ ಮರಣ ಶಾಸನ ಅಥವಾ ಇತರ ಯಾವುದೇ ಲಿಖಿತ ಅಥವಾ ಸಿವಿಲ್ ನ್ಯಾಯಾಲಯದ ಡಿಕ್ರಿ ಅಥವಾ ಆದೇಶದ ಮೇರೆಗೆ ಅಥವಾ ಐತೀರ್ಪಿನ ಮೇರೆಗೆ ಆರ್ಜಿಸಿದ ಯಾವುದೇ ಸ್ವತ್ತಿಗೆ ಅಂಥ ದಾನ, ಮರಣ ಶಾಸನ ಅಥವಾ ಇತರ ಲಿಖಿತ ಅಥವಾ ಡಿಕ್ರಿ, ಆದೇಶ ಅಥವಾ ಐತೀರ್ಪಿನ ನಿಬಂಧನೆಗಳು ಅಂಥ ಸ್ವತ್ತಿನಲ್ಲಿ ಒಂದು ನಿರ್ಬಂಧಿತ ಸಂಪದವನ್ನು ನಿಗದಿ ಮಾಡುವಾಗ ಅನ್ವಯಿಸತಕ್ಕದ್ದಲ್ಲ.

**15.** ಹಿಂದೂ ಸ್ತ್ರೀಯರ ಸಂದರ್ಭದಲ್ಲಿ ಉತ್ತರಾಧಿಕಾರದ ಸಾಮಾನ್ಯ ನಿಯಮಗಳು.— (1) ಮರಣಶಾಸನ ರಹಿತವಾಗಿ ಮೃತಳಾಗುವ ಹಿಂದೂ ಸ್ತ್ರೀಯ ಸ್ವತ್ತು 16ನೇ ಪ್ರಕರಣದಲ್ಲಿ ಹೇಳಿದ ನಿಯಮಗಳಿಗನುಸಾರವಾಗಿ ಪ್ರಾಪ್ತವಾಗತಕ್ಕದ್ದು:—

(ಕ) ಮೊದಲನೆಯದಾಗಿ ಪುತ್ರರಿಗೆ ಮತ್ತು ಪುತ್ರಿಯರಿಗೆ (ಪೂರ್ವಮೃತನಾದ/ಳಾದ ಪುತ್ರನ ಅಥವಾ ಪುತ್ರಿಯ ಮಕ್ಕಳೂ ಸೇರಿ) ಮತ್ತು ಗಂಡನಿಗೆ;

(ಖ) ಎರಡನೆಯದಾಗಿ, ಗಂಡನ ವಾರಸುದಾರರಿಗೆ;

(ಗ) ಮೂರನೆಯದಾಗಿ, ತಾಯಿಗೆ ಮತ್ತು ತಂದೆಗೆ;

(ಘ) ನಾಲ್ಕನೆಯದಾಗಿ, ತಂದೆಯ ವಾರಸುದಾರರಿಗೆ; ಮತ್ತು

(ಙ) ಕೊನೆಯದಾಗಿ ತಾಯಿಯ ವಾರಸುದಾರರಿಗೆ;

(2) (1)ನೆಯ ಉಪಪ್ರಕರಣದಲ್ಲಿ ಏನೇ ಇದ್ದರೂ,—

(ಕ) ಹಿಂದೂ ಸ್ತ್ರೀಯು ತನ್ನ ತಂದೆಯಿಂದ ಅಥವಾ ತಾಯಿಯಿಂದ ವಾರಸಿನಲ್ಲಿ ಪಡೆದ ಯಾವುದೇ ಸ್ವತ್ತು ಮೃತಳ ಯಾವನೇ ಪುತ್ರನು ಅಥವಾ ಪುತ್ರಿಯು (ಪೂರ್ವಮೃತನಾದ/ಳಾದ ಯಾವನೇ ಪುತ್ರನ ಅಥವಾ ಪುತ್ರಿಯ ಮಕ್ಕಳೂ ಸೇರಿ) ಇಲ್ಲದಿರುವಾಗ (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಇತರ ವಾರಸುದಾರರಿಗೆ ಅದರಲ್ಲಿ ನಿರ್ದಿಷ್ಟಪಡಿಸಿದ ಕ್ರಮದಲ್ಲಿ ಪ್ರಾಪ್ತವಾಗದೆ, ತಂದೆಯ ವಾರಸುದಾರರಿಗೆ ಪ್ರಾಪ್ತವಾಗತಕ್ಕದ್ದು; ಮತ್ತು

(ಖ) ಹಿಂದೂ ಸ್ತ್ರೀಯು ತನ್ನ ಗಂಡನಿಂದ ಅಥವಾ ಮಾವನಿಂದ ವಾರಸಿನಲ್ಲಿ ಪಡೆದ ಸ್ವತ್ತು ಮೃತಳ ಯಾವೊಬ್ಬ ಪುತ್ರನು ಅಥವಾ ಪುತ್ರಿಯು (ಪೂರ್ವಮೃತನಾದ/ಳಾದ ಯಾವೊಬ್ಬ ಪುತ್ರನ ಅಥವಾ ಪುತ್ರಿಯ ಮಕ್ಕಳೂ ಸೇರಿ) ಇಲ್ಲದಿರುವಾಗ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಇತರ ವಾರಸುದಾರರಿಗೆ ಅದರಲ್ಲಿ ನಿರ್ದಿಷ್ಟಪಡಿಸಿದ ಕ್ರಮದಲ್ಲಿ ಪ್ರಾಪ್ತವಾಗದೆ, ಗಂಡನ ವಾರಸುದಾರರಿಗೆ ಪ್ರಾಪ್ತವಾಗತಕ್ಕದ್ದು.

**16. ಹಿಂದೂ ಸ್ತ್ರೀಯ ವಾರಸುದಾರರಲ್ಲಿ ಉತ್ತರಾಧಿಕಾರ ಕ್ರಮ ಮತ್ತು ಹಂಚಿಕೆ ರೀತಿ.**—15ನೇ ಪ್ರಕರಣದಲ್ಲಿ ನಿರ್ದೇಶಿಸಿದ ವಾರಸುದಾರರಲ್ಲಿ ಉತ್ತರಾಧಿಕಾರದ ಕ್ರಮವು ಮತ್ತು ಆ ವಾರಸುದಾರರಲ್ಲಿ ಮರಣ ಶಾಸನ ರಹಿತಳ ಸ್ವತ್ತಿನ ಹಂಚಿಕೆಯು ಕೆಳಕಂಡ ನಿಯಮಗಳಿಗನುಸಾರವಾಗಿ ನಡೆಯತಕ್ಕದ್ದು, ಎಂದರೆ :—

ನಿಯಮ 1 :—15ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ವಾರಸುದಾರರಲ್ಲಿ ಒಂದು ನಮೂದಿನಲ್ಲಿರುವವರಿಗೆ ಅದರ ತರುವಾಯ ಬರುವ ಯಾವುದೇ ನಮೂದಿನಲ್ಲಿರುವವರಿಗಿಂತ ಪ್ರಾಶಸ್ತ್ಯವಿರತಕ್ಕದ್ದು [ಮತ್ತು ಒಂದೇ ನಮೂದಿನಲ್ಲಿ ಸೇರಿರುವವರು ಏಕಕಾಲದಲ್ಲಿಯೇ] ತೆಗೆದುಕೊಳ್ಳತಕ್ಕದ್ದು.

ನಿಯಮ 2 :—ಮರಣ ಶಾಸನ ರಹಿತ ವ್ಯಕ್ತಿಳ ಯಾವನೇ ಪುತ್ರನು ಅಥವಾ ಪುತ್ರಿಯು, ಮರಣ ಶಾಸನರಹಿತಳ ಮರಣ ಕಾಲದಲ್ಲಿ ತನ್ನ ಸ್ವಂತ ಮಕ್ಕಳನ್ನು ಜೀವಂತ ಬಿಟ್ಟು ಮರಣ ಶಾಸನರಹಿತಳಿಗಿಂತ ಪೂರ್ವದಲ್ಲಿಯೇ ಮರಣ ಹೊಂದಿದ್ದರೆ, ಮರಣಶಾಸನ ರಹಿತಳ ಮರಣ ಕಾಲದಲ್ಲಿ ಅಂಥ ಪುತ್ರನು ಅಥವಾ ಪುತ್ರಿಯು ಬದುಕಿದ್ದರೆ ಅವನು ಅಥವಾ ಅವಳು ಪಡೆಯಬಹುದಾಗಿದ್ದಂಥ ಪಾಲನ್ನು ಅಂಥ ಪುತ್ರನ ಅಥವಾ ಪುತ್ರಿಯ ಮಕ್ಕಳು ತಮ್ಮ ತಮ್ಮೊಳಗೆ ಪಡೆಯತಕ್ಕದ್ದು.

ನಿಯಮ 3 :—15ನೇ ಪ್ರಕರಣದ (1)ನೇ ಉಪಪ್ರಕರಣದ (ಖ), (ಘ) ಮತ್ತು (ಙ) ಖಂಡಗಳಲ್ಲಿ ಮತ್ತು (2)ನೇ ಉಪಪ್ರಕರಣದಲ್ಲಿ ನಿರ್ದೇಶಿಸಿದ ವಾರಸುದಾರರಲ್ಲಿ ಮರಣಶಾಸನರಹಿತಳ ಸ್ವತ್ತು, ಸಂದರ್ಭಾನುಸಾರ, ಆ ಸ್ವತ್ತು ತಂದೆಯದು ಅಥವಾ ತಾಯಿಯದು ಅಥವಾ ಗಂಡನದ್ದು ಆಗಿದ್ದು ಮತ್ತು ಅಂಥ ವ್ಯಕ್ತಿಯು ಮರಣ ಶಾಸನರಹಿತಳ ಮರಣಕ್ಕೆ ನಿಕಟ ತರುವಾಯದಲ್ಲಿ ಮರಣ ಶಾಸನ ಮಾಡದೆ ಮರಣ ಹೊಂದಿದ್ದರೆ ಅನ್ವಯಿಸುತ್ತಿದ್ದ ಕ್ರಮದಲ್ಲಿಯೇ ಮತ್ತು ಅವೇ ನಿಯಮಗಳಿಗನುಸಾರವಾಗಿ, ಪ್ರಾಪ್ತವಾಗತಕ್ಕದ್ದು.

**17. ಮರುಮಕ್ಕತ್ತಾಯಮ್ ಮತ್ತು ಅಳಿಯ ಸಂತಾನ ಕಾನೂನುಗಳಿಗೆ ಒಳಪಡುವ ವ್ಯಕ್ತಿಗಳ ಸಂಬಂಧದಲ್ಲಿ ವಿಶೇಷ ಉಪಬಂಧಗಳು.**—8, 10, 15 ಮತ್ತು 23ನೇ ಪ್ರಕರಣಗಳ ಉಪಬಂಧಗಳು ಈ ಅಧಿನಿಯಮವು ಅನುಮೋದಿತವಾಗಿರದಿದ್ದರೆ ಮರುಮಕ್ಕತ್ತಾಯಮ್ ಕಾನೂನು ಅಥವಾ ಅಳಿಯ ಸಂತಾನ ಕಾನೂನಿಗೆ ಒಳಪಡಬಹುದಾಗಿದ್ದ ವ್ಯಕ್ತಿಗಳ ಸಂಬಂಧದಲ್ಲಿ—

(i) 8ನೇ ಪ್ರಕರಣದ (ಗ) ಮತ್ತು (ಘ) ಉಪಪ್ರಕರಣಗಳ ಬದಲಾಗಿ ಈ ಕೆಳಗಿನವುಗಳು ಪ್ರತಿಸ್ಥಾಪಿತವಾಗಿದ್ದಂತೆ, ಎಂದರೆ :—

"(ಗ) ಮೂರನೆಯದಾಗಿ, ಈ ಎರಡೂ ವರ್ಗಗಳ ಯಾವನೇ ವಾರಸುದಾರನೂ ಇಲ್ಲದಿದ್ದರೆ, ಅವನ ಸಂಬಂಧಿಗಳಿಗೆ, ಅವರು ಗೋತ್ರಜರಾಗಿರಲಿ ಅಥವಾ ಬಂಧುಗಳಾಗಿರಲಿ;"

(ii) 15ನೇ ಪ್ರಕರಣದ (1)ನೇ ಉಪಪ್ರಕರಣದ (ಕ)ದಿಂದ (ಙ)ದ ವರೆಗಿನ ಖಂಡಗಳ ಬದಲಾಗಿ ಈ ಕೆಳಗಿನವುಗಳು ಪ್ರತಿಸ್ಥಾಪಿತವಾಗಿದ್ದಂತೆ, ಎಂದರೆ :—

"(ಕ) ಮೊದಲನೆಯದಾಗಿ, (ಪೂರ್ವ ಮೃತನಾದ/ಳಾದ ಪುತ್ರನ ಅಥವಾ ಪುತ್ರಿಯ ಮಕ್ಕಳೂ ಸೇರಿ) ಪುತ್ರರಿಗೆ ಅಥವಾ ಪುತ್ರಿಯರಿಗೆ ಮತ್ತು ತಾಯಿಗೆ ;

(ಖ) ಎರಡನೆಯದಾಗಿ, ತಂದೆಗೆ ಮತ್ತು ಗಂಡನಿಗೆ;

(ಗ) ಮೂರನೆಯದಾಗಿ, ತಾಯಿಯ ವಾರಸುದಾರರಿಗೆ;

(ಘ) ನಾಲ್ಕನೆಯದಾಗಿ, ತಂದೆಯ ವಾರಸುದಾರರಿಗೆ; ಮತ್ತು

(ಙ) ಕೊನೆಯದಾಗಿ, ಗಂಡನ ವಾರಸುದಾರರಿಗೆ;

(iii) 15ನೇ ಪ್ರಕರಣದ (2)ನೇ ಉಪಪ್ರಕರಣದ (ಕ) ಖಂಡವನ್ನು ಬಿಟ್ಟಿದ್ದಂತೆ;

(iv) 23ನೇ ಪ್ರಕರಣವನ್ನು ಬಿಟ್ಟಿದ್ದಂತೆ-ಪರಿಣಾಮಕಾರಿಯಾಗಿರತಕ್ಕದ್ದು.

**ಉತ್ತರಾಧಿಕಾರಕ್ಕೆ ಸಂಬಂಧಿಸಿದ ಸಾಮಾನ್ಯ ಉಪಬಂಧಗಳು**

**18. ಅರ್ಧ ರಕ್ತಕ್ಕಿಂತ ಪೂರ್ಣರಕ್ತಕ್ಕೆ ಪ್ರಾಶಸ್ತ್ಯ.**:—ಬಾಂಧವ್ಯದ ಸ್ವರೂಪವು ಇತರ ಪ್ರತಿಯೊಂದು ವಿಷಯದಲ್ಲಿ ಒಂದೇ ಆಗಿದ್ದರೆ, ಮರಣ ಶಾಸನ ರಹಿತನ ಅರ್ಧ ರಕ್ತ ಸಂಬಂಧಿಗಳಿಗಿಂತ ಪೂರ್ಣ ರಕ್ತ ಸಂಬಂಧಿಗಳಾದ ವಾರಸುದಾರರಿಗೆ ಪ್ರಾಶಸ್ತ್ಯವಿರತಕ್ಕದ್ದು.

**19. ಇಬ್ಬರು ಅಥವಾ ಹೆಚ್ಚು ವಾರಸುದಾರರಲ್ಲಿ ಉತ್ತರಾಧಿಕಾರದ ಬಗೆ.**—ಇಬ್ಬರು ಅಥವಾ ಹೆಚ್ಚು ವಾರಸುದಾರರು ಒಟ್ಟಿಗೆ ಮರಣ ಶಾಸನ ರಹಿತನ ಸ್ವತ್ತಿನ ಉತ್ತರಾಧಿಕಾರಿಗಳಾದರೆ, ಅವರು ಸ್ವತ್ತನ್ನು—

(ಕ) ಈ ಅಧಿನಿಯಮದಲ್ಲಿ ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿದುದನ್ನುಳಿದು, ವ್ಯಕ್ತಿವಾರು ಲೆಕ್ಕದಿಂದ, ಶಾಖಾವಾರು ಲೆಕ್ಕದಿಂದ ಅಲ್ಲ; ಮತ್ತು

(ಖ) ಜಂಟೀ ಹಕ್ಕುದಾರರಂತೆ ಅಲ್ಲದೆ ಸಮಷ್ಟೀ ಹಕ್ಕುದಾರರಂತೆ ತೆಗೆದುಕೊಳ್ಳತಕ್ಕದ್ದು.

**20. ಗರ್ಭಸ್ಥ ಶಿಶುವಿನ ಅಧಿಕಾರ.**— ಮರಣ ಶಾಸನ ರಹಿತನ ಮರಣ ಕಾಲದಲ್ಲಿ ಗರ್ಭಸ್ಥವಾಗಿದ್ದು ಆಮೇಲೆ ಜೀವಂತವಾಗಿ ಜನಿಸಿದ ಶಿಶು, ಅದು ಮರಣ ಶಾಸನ ರಹಿತನ ಮರಣಕ್ಕಿಂತ ಮುಂಚೆಯೇ ಹುಟ್ಟಿದ್ದರೆ ಹೇಗೋ ಹಾಗೆ ಮರಣ ಶಾಸನ ರಹಿತನ ವಾರಸಿಗೆ ಅಧಿಕಾರವುಳ್ಳದ್ದಾಗಿರತಕ್ಕದ್ದು, ಮತ್ತು ಅಂಥ ಸಂದರ್ಭದಲ್ಲಿ ಮರಣ ಶಾಸನ ರಹಿತನ ಮರಣದ ತಾರೀಖಿನಿಂದಲೇ ಅಂಥ ವಾರಸು ಅಧಿಕಾರ ನಿಹಿತವಾಗಿದೆಯೆಂದು ಭಾವಿಸಲ್ಪಡತಕ್ಕದ್ದು.

**21. ಏಕಕಾಲಿಕ ಮರಣದ ಸಂದರ್ಭದಲ್ಲಿ ಪೂರ್ವಭಾವನೆ.**—ಇಬ್ಬರು ಮರಣ ಹೊಂದಿದ ಸನ್ನಿವೇಶದಲ್ಲಿ ಅವರಲ್ಲಿ ಯಾವನು ಮೊದಲು ಮರಣ ಹೊಂದಿದನು ಮತ್ತು ಯಾವನು ಅನಂತರ ಮರಣ ಹೊಂದಿದನು ಎಂಬುದು ಖಚಿತವಾಗದಿರುವಾಗ ಸ್ವತ್ತಿನ ಉತ್ತರಾಧಿಕಾರದ ಮೇಲೆ ಪ್ರಭಾವ ಬೀರುವ ಎಲ್ಲ ಉದ್ದೇಶಗಳಿಗಾಗಿ ತದ್ವಿರುದ್ಧ ರುಜುವಾತಾಗುವವರೆಗೆ ಅವರಲ್ಲಿ ಚಿಕ್ಕವನು ಹಿರಿಯನ ಅನಂತರ ಮರಣ ಹೊಂದಿದನೆಂದು ಪೂರ್ವಭಾವನೆ ಮಾಡತಕ್ಕದ್ದು.

**22. ಕೆಲವು ಸಂದರ್ಭಗಳಲ್ಲಿ ಸ್ವತ್ತನ್ನು ಅರ್ಜಿಸಲು ಪ್ರಾಶಸ್ತ್ಯ ಹಕ್ಕು ಇರುವುದು.**— (1) ಈ ಅಧಿನಿಯಮದ ಪ್ರಾರಂಭದ ತರುವಾಯ ಮರಣ ಶಾಸನ ರಹಿತನ ಯಾವುದೇ ಸ್ಥಿರ ಸ್ವತ್ತಿನಲ್ಲಿಯ, ಅಥವಾ ಅವನು ಅಥವಾ ಅವಳು ತಾನೇ ಅಥವಾ ಇತರರೊಂದಿಗೆ ಸೇರಿ ನಡೆಸುತ್ತಿದ್ದ ವ್ಯವಹಾರದಲ್ಲಿಯ ಹಿತಾಸಕ್ತಿಯು ಅನುಸೂಚಿಯ ವರ್ಗ 1ರಲ್ಲಿ ಉಲ್ಲೇಖಿಸಿದ ಇಬ್ಬರು ಅಥವಾ ಹೆಚ್ಚು ವಾರಸುದಾರರಿಗೆ ಪ್ರಾಪ್ತವಾಗುತ್ತಿರುವಲ್ಲಿ ಮತ್ತು ಅಂಥ ವಾರಸುದಾರರಲ್ಲಿ ಯಾವನೇ ಒಬ್ಬನು ಸ್ವತ್ತಿನಲ್ಲಿಯ ಅಥವಾ ವ್ಯವಹಾರದಲ್ಲಿಯ ತನ್ನ ಹಿತಾಸಕ್ತಿಯನ್ನು ವರ್ಗಾಯಿಸಲು ಉದ್ದೇಶಿಸಿದರೆ, ಹಾಗೆ ವರ್ಗಾಯಿಸಲು ಉದ್ದೇಶಿಸಿದ ಹಿತಾಸಕ್ತಿಯನ್ನು ಅರ್ಜಿಸಲು ಇತರ ವಾರಸುದಾರರಿಗೆ ಪ್ರಾಶಸ್ತ್ಯ ಹಕ್ಕು ಇರತಕ್ಕದ್ದು.

(2) ಈ ಪ್ರಕರಣದ ಮೇರೆಗೆ ಮೃತನ ಸ್ವತ್ತಿನಲ್ಲಿಯ ಯಾವುದೇ ಹಿತಾಸಕ್ತಿಯ ವರ್ಗಾವಣೆಯ ಪ್ರತಿಫಲವು, ಪಕ್ಷಕಾರರಲ್ಲಿ ಯಾವುದೇ ಒಪ್ಪಂದವಾಗಿರದಿದ್ದರೆ, ಈ ಬಗ್ಗೆ ನ್ಯಾಯಾಲಯಕ್ಕೆ ಮಾಡಿಕೊಂಡ ಅರ್ಜಿಯ ಮೇರೆಗೆ ಅದರಿಂದ ನಿರ್ಧರಿತವಾಗತಕ್ಕದ್ದು, ಮತ್ತು ಆ ಹಿತಾಸಕ್ತಿಯನ್ನು ಅರ್ಜಿಸಲುದ್ದೇಶಿಸಿದ ಯಾವನೇ ವ್ಯಕ್ತಿಯು ಹಾಗೆ ನಿರ್ಧರಿಸಿದ ಪ್ರತಿಫಲಕ್ಕೆ ಅದನ್ನು ಅರ್ಜಿಸಲು ಇಷ್ಟವಿಲ್ಲದವನಾಗಿದ್ದರೆ, ಅವನು ಅಂಥ ಅರ್ಜಿಯ ಅಥವಾ ಅದಕ್ಕೆ ಪ್ರಾಸಂಗಿಕವಾದ ಎಲ್ಲ ಖರ್ಚನ್ನು ಕೊಡಲು ಹೊಣೆಯಾಗಿರತಕ್ಕದ್ದು.

(3) ಅನುಸೂಚಿಯ 1ನೇ ವರ್ಗದಲ್ಲಿ ನಿರ್ದಿಷ್ಟಪಡಿಸಿದ ಇಬ್ಬರು ಅಥವಾ ಹೆಚ್ಚು ವಾರಸುದಾರರು ಈ ಪ್ರಕರಣದ ಮೇರೆಗೆ ಹಿತಾಸಕ್ತಿಯನ್ನು ಅರ್ಜಿಸಲುದ್ದೇಶಿಸಿದವರಾಗಿದ್ದರೆ, ವರ್ಗಾವಣೆಗೆ ಅತಿ ಹೆಚ್ಚಿನ ಪ್ರತಿಫಲ ನೀಡುವ ವಾರಸುದಾರನಿಗೆ ಪ್ರಾಶಸ್ತ್ಯವಿರತಕ್ಕದ್ದು.

**ವಿವರಣೆ.**—ಈ ಪ್ರಕರಣದಲ್ಲಿ "ನ್ಯಾಯಾಲಯ" ಎಂದರೆ, ಯಾವ ನ್ಯಾಯಾಲಯದ ವ್ಯಾಪ್ತಿಯ ಪರಿಮಿತಿಗಳೊಳಗೆ ಈ ಸ್ಥಿರ ಸ್ವತ್ತು ಇದೆಯೋ ಅಥವಾ ವ್ಯವಹಾರ ನಡೆಯುತ್ತಿದೆಯೋ ಆ ನ್ಯಾಯಾಲಯ ಮತ್ತು ಇದರಲ್ಲಿ ಈ ಬಗ್ಗೆ ಸರಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಸರಕಾರವು ನಿರ್ದಿಷ್ಟಪಡಿಸುವಂಥ ಯಾವುದೇ ಇತರ ನ್ಯಾಯಾಲಯವೂ ಸೇರಿರುವುದು.

**23. ವಾಸದ ಮನೆಗಳ ಸಂಬಂಧದಲ್ಲಿ ವಿಶೇಷ ಉಪಬಂಧ.**—ಮರಣ ಶಾಸನ ಮಾಡದ ಒಬ್ಬ ಹಿಂದೂ ತನ್ನ ಉತ್ತರ ಜೀವಿಗಳಾಗಿ ಅನುಸೂಚಿಯ 1ನೇ ವರ್ಗದಲ್ಲಿ ನಿರ್ದಿಷ್ಟಪಡಿಸಿದ ಪುರುಷ ಅಥವಾ ಸ್ತ್ರೀ ವಾರಸುದಾರರನ್ನು ಬಿಟ್ಟು ಹೋಗಿರುವಲ್ಲಿ ಮತ್ತು ಅವನ ಅಥವಾ ಅವಳ ಸ್ವತ್ತಿನಲ್ಲಿ ಅವನ ಅಥವಾ ಅವಳ ಕುಟುಂಬದವರ ಸಂಪೂರ್ಣ ಅಧಿಭೋಗದಲ್ಲಿರುವ ವಾಸದ ಮನೆಯೂ ಸೇರಿರುವಲ್ಲಿ, ಈ ಅಧಿನಿಯಮದಲ್ಲಿ ಏನೇ ಇದ್ದರೂ, ಪುರುಷ ವಾರಸುದಾರರು ಅದರಲ್ಲಿನ ತಮ್ಮ ಪಾಲುಗಳನ್ನು ಹಂಚಿಕೊಳ್ಳಲಿಚ್ಛಿಸುವವರೆಗೆ ಆ ವಾಸದ ಮನೆಯ ವಿಭಾಗವನ್ನು ಕ್ಲೇಮು ಮಾಡಲು ಅಂಥ ಯಾವಳೇ ಸ್ತ್ರೀ ವಾರಸುದಾರಳಿಗೂ ಹಕ್ಕು ಉದ್ಭವಿಸುವುದಿಲ್ಲ; ಆದರೆ ಅಂಥ ಸ್ತ್ರೀ ವಾರಸುದಾರಳಿಗೆ ಅದರಲ್ಲಿ ವಾಸ ಮಾಡುವ ಹಕ್ಕಿಗೆ ಅಧಿಕಾರವಿರತಕ್ಕದ್ದು:

ಪರಂತು, ಅಂಥ ಸ್ತ್ರೀ ವಾರಸುದಾರಳು ಪುತ್ರಿಯಾಗಿರುವಲ್ಲಿ, ಅವಳು ಅವಿವಾಹಿತಳಾಗಿದ್ದರೆ, ಅಥವಾ ತನ್ನ ಗಂಡನಿಂದ ಪರಿತ್ಯಕ್ತಳಾಗಿದ್ದರೆ ಅಥವಾ ಪ್ರತ್ಯೇಕಗೊಂಡಿದ್ದರೆ ಅಥವಾ ವಿಧವೆಯಾಗಿದ್ದರೆ ಮಾತ್ರ ಆ ವಾಸದ ಮನೆಯಲ್ಲಿ ವಾಸಿಸುವ ಹಕ್ಕಿಗೆ ಅಧಿಕಾರವಿರತಕ್ಕದ್ದು.

**24. ಪುನರ್ವಿವಾಹವಾಗುವ ಕೆಲವು ವಿಧವೆಯರು ವಿಧವೆಯರಂತೆ ವಾರಸು ಪಡೆಯಲು ಆಗದಿರಬಹುದು.**—ಪೂರ್ವ ಮೃತನಾದ ಪುತ್ರನ ವಿಧವೆಯಂತೆ, ಪೂರ್ವ ಮೃತನಾದ ಪುತ್ರನ ಪೂರ್ವ ಮೃತ ಪುತ್ರನ ವಿಧವೆಯಂತೆ ಅಥವಾ ಅಣ್ಣ ಅಥವಾ ತಮ್ಮನ ವಿಧವೆಯಂತೆ ಮರಣ ಶಾಸನ ರಹಿತನ ಸಂಬಂಧಿಯಾಗಿರುವ ಯಾವಳೇ ವಾರಸುದಾರಳು, ಉತ್ತರಾಧಿಕಾರವು ಆರಂಭವಾಗುವ ತಾರೀಖಿನಂದು ಪುನರ್ವಿವಾಹವಾಗಿದ್ದರೆ, ಅಂಥ ವಿಧವೆಯಂತೆ, ಮರಣ ಶಾಸನ ರಹಿತನ ಸ್ವತ್ತಿಗೆ ವಾರಸುದಾರಳಾಗಿರಲು ಹಕ್ಕುಳ್ಳವಳಾಗತಕ್ಕದ್ದಲ್ಲ.

**25. ಕೊಲೆಗಾರನ ಅನರ್ಹತೆ.**—ಕೊಲೆ ಮಾಡುವ ಅಥವಾ ಕೊಲೆ ಮಾಡುವುದಕ್ಕೆ ದುಷ್ಪ್ರೇರಣೆ ಮಾಡುವ ವ್ಯಕ್ತಿಯು, ಕೊಲೆಯಾದ ವ್ಯಕ್ತಿಯ ಯಾವ ಸ್ವತ್ತಿಗೆ ಅಥವಾ ಸ್ವತ್ತಿನ ಉತ್ತರಾಧಿಕಾರದ ಮುಂದುವರಿಕೆಗಾಗಿ ಅವನು ಅಥವಾ ಅವಳು ಕೊಲೆ ಮಾಡಿದನೋ/ಳೋ ಅಥವಾ ಕೊಲೆ ಮಾಡುವುದಕ್ಕೆ ದುಷ್ಪ್ರೇರಣೆ ಮಾಡಿದನೋ/ಳೋ ಅಂಥ ಯಾವುದೇ ಇತರ ಸ್ವತ್ತಿಗೆ, ವಾರಸುದಾರನಾಗಲು/ಳಾಗಲು ಅನರ್ಹನಾಗಿರ/ಳಾಗಿರತಕ್ಕದ್ದು.

**26. ಮತಾಂತರಿತನ ವಂಶಜರ ಅನರ್ಹತೆ.**—ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಅಥವಾ ತರುವಾಯದಲ್ಲಿ ಒಬ್ಬ ಹಿಂದೂ ಮತ್ತೊಂದು ಮತಕ್ಕೆ ಮತಾಂತರಿತನಾದ ಕಾರಣದಿಂದ ಹಿಂದೂ ಆಗಿರುವುದು ನಿಂತು ಹೋಗಿದ್ದರೆ ಅಥವಾ ನಿಂತು ಹೋದರೆ, ಅಂಥ ಮತಾಂತರದ ತರುವಾಯ ಅವನಿಗೆ ಅಥವಾ ಅವಳಿಗೆ ಜನಿಸಿದ ಮಕ್ಕಳು ಮತ್ತು ಅವರ ವಂಶಜರು, ಉತ್ತರಾಧಿಕಾರವು ಆರಂಭವಾಗುವ ಕಾಲದಲ್ಲಿ ಅಂಥ ಮಕ್ಕಳು ಅಥವಾ ವಂಶಜರು ಹಿಂದೂ ಆಗಿದ್ದ ಹೊರತು, ತಮ್ಮ ಯಾವ ಹಿಂದೂ ಸಂಬಂಧಿಗಳ ಸ್ವತ್ತನ್ನು ವಾರಸಾಗಿ ಪಡೆಯಲು ಅನರ್ಹರಾಗಿರತಕ್ಕದ್ದು.

**27. ವಾರಸುದಾರನು ಅನರ್ಹನಾಗಿರುವಾಗ ಉತ್ತರಾಧಿಕಾರ.**—ಯಾವನೇ ವ್ಯಕ್ತಿಯು, ಈ ಅಧಿನಿಯಮದ ಮೇರೆಗೆ ಯಾವುದೇ ಸ್ವತ್ತನ್ನು ವಾರಸಿನಲ್ಲಿ ಪಡೆಯಲು ಅನರ್ಹನಾಗಿದ್ದರೆ, ಅಂಥ ವ್ಯಕ್ತಿಯು ಮರಣ ಶಾಸನ ರಹಿತನಿಗಿಂತ ಮುಂಚೆಯೇ ಮರಣ ಹೊಂದಿದ್ದನೆಂಬಂತೆ, ಆ ಸ್ವತ್ತು ಪ್ರಾಪ್ತವಾಗತಕ್ಕದ್ದು.

**28. ರೋಗ, ನ್ಯೂನತೆ, ಇತ್ಯಾದಿಗಳಿಂದ ಅನರ್ಹತೆಯುಂಟಾಗುವುದಿಲ್ಲ.**—ಯಾವನೇ ವ್ಯಕ್ತಿಯೂ, ಯಾವುದೇ ರೋಗ, ನ್ಯೂನತೆ ಅಥವಾ ಅಂಗವಿಕಲತೆಯ ಕಾರಣದ ಮೇಲೆ, ಅಥವಾ ಈ ಅಧಿನಿಯಮದಲ್ಲಿ ಉಪಬಂಧಿಸಿದುದನ್ನುಳಿದು ಯಾವುದೇ ಇತರ ಕಾರಣದ ಮೇಲೆ ಯಾವುದೇ ಸ್ವತ್ತಿಗೆ ವಾರಸುದಾರನಾಗಲು ಅನರ್ಹನಾಗತಕ್ಕದ್ದಲ್ಲ.

### ರಾಜಗಾಮಿತ್ವ

**29.** ವಾರಸುದಾರರು ಇಲ್ಲದಿರುವಿಕೆ.—ಒಬ್ಬ ಮರಣ ಶಾಸನ ರಹಿತನು, ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ತನ್ನ ಸ್ವತ್ತಿಗೆ ಉತ್ತರಾಧಿಕಾರಿಯಾಗಲು ಅರ್ಹನಾಗುವ ಯಾರೇ ವಾರಸುದಾರರನ್ನೂ ಬಿಟ್ಟು ಹೋಗಿರದಿದ್ದರೆ, ಅಂಥ ಸ್ವತ್ತು ಸರಕಾರಕ್ಕೆ ಪ್ರಾಪ್ತವಾಗತಕ್ಕದ್ದು, ಮತ್ತು ಸರಕಾರವು ಅಂಥ ಸ್ವತ್ತನ್ನು, ಒಬ್ಬ ವಾರಸುದಾರನು ಒಳಪಡಬಹುದಾಗಿದ್ದಂಥ ಎಲ್ಲ ಹೊಣೆಗಳಿಗೆ ಮತ್ತು ಬಾಧ್ಯತೆಗಳಿಗೆ ಒಳಪಟ್ಟು ತೆಗೆದುಕೊಳ್ಳತಕ್ಕದ್ದು.

## ಅಧ್ಯಾಯ III

### ಮರಣ ಶಾಸನ ರೀತ್ಯಾ ಉತ್ತರಾಧಿಕಾರ

**30.** ಮರಣ ಶಾಸನ ರೀತ್ಯಾ ಉತ್ತರಾಧಿಕಾರ.—ಯಾವನೇ ಹಿಂದೂ, ಭಾರತೀಯ ಉತ್ತರಾಧಿಕಾರ ಅಧಿನಿಯಮ, 1925ರ ಉಪಬಂಧಗಳಿಗೆ ಅಥವಾ ಆಯಾ ಕಾಲಕ್ಕೆ ಜಾರಿಯಲ್ಲಿರುವ ಮತ್ತು ಹಿಂದೂಗಳಿಗೆ ಅನ್ವಯಿಸುವ ಯಾವುದೇ ಕಾನೂನಿಗೆ ಅನುಸಾರವಾಗಿ, ತನ್ನಿಂದ ಹಾಗೆ ವಿಲೆಯಾಗಬಹುದಾಗಿದ್ದಂಥ ಯಾವುದೇ ಸ್ವತ್ತನ್ನು ಮರಣ ಶಾಸನ ಅಥವಾ ಬೇರೆ ಅಂಥದೇ ರೀತಿಯ ಶಾಸನದ ಮೂಲಕವಾಗಿ ವಿಲೆ ಮಾಡಬಹುದು.

ವಿವರಣೆ.—ಮಿತಾಕ್ಷರ ದಾಯಾದಿತ್ವದ ಸ್ವತ್ತಿನಲ್ಲಿಯ ಒಬ್ಬ ಹಿಂದೂ ಪುರುಷನ ಹಿತಾಸಕ್ತಿಯನ್ನು ಅಥವಾ ತರವಾಡ, ತವಾಝಿ, ಇಲ್ಲಮ್, ಕುಟುಂಬ ಅಥವಾ ಕವರಿನ ಸ್ವತ್ತಿನಲ್ಲಿಯ ತರವಾಡ, ತವಾಝಿ, ಇಲ್ಲಮ್, ಕುಟುಂಬ ಅಥವಾ ಕವರಿಗೆ ಸೇರಿದ ಒಬ್ಬ ಸದಸ್ಯನ ಹಿತಾಸಕ್ತಿಯನ್ನು, ಈ ಅಧಿನಿಯಮದಲ್ಲಿ ಅಥವಾ ಆಯಾ ಕಾಲದಲ್ಲಿ ಜಾರಿಯಲ್ಲಿದ್ದ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಈ ಪ್ರಕರಣದ ಅರ್ಥದಲ್ಲಿ ಆತನಿಂದ ಅಥವಾ ಆಕೆಯಿಂದ ವಿಲೆಯಾಗಬಹುದಾದ ಸ್ವತ್ತೆಂದು ಭಾವಿಸತಕ್ಕದ್ದು.

## ಅಧ್ಯಾಯ IV

### ನಿರಸನಗಳು

**31.** (ನಿರಸಿತ)

## ಅನುಸೂಚಿ

(8ನೇ ಪ್ರಕರಣವನ್ನು ನೋಡಿ)

I ನೇ ವರ್ಗ ಮತ್ತು IIನೇ ವರ್ಗದಲ್ಲಿಯ ವಾರಸುದಾರರು.

### Iನೇ ವರ್ಗ

ಪುತ್ರ; ಪುತ್ರಿ; ವಿಧವೆ; ತಾಯಿ; ಪೂರ್ವ ಮೃತ ಪುತ್ರನ ಪುತ್ರ; ಪೂರ್ವ ಮೃತ ಪುತ್ರನ ಪುತ್ರಿ; ಪೂರ್ವ ಮೃತ ಪುತ್ರಿಯ ಪುತ್ರ; ಪೂರ್ವ ಮೃತ ಪುತ್ರಿಯ ಪುತ್ರಿ; ಪೂರ್ವ ಮೃತ ಪುತ್ರನ ವಿಧವೆ; ಪೂರ್ವ ಮೃತನಾದ ಪುತ್ರನ ಪೂರ್ವ ಮೃತ ಪುತ್ರನ ಪುತ್ರ ; ಪೂರ್ವ ಮೃತನಾದ ಪುತ್ರನ ಪೂರ್ವ ಮೃತ ಪುತ್ರನ ಪುತ್ರಿ ; ಪೂರ್ವ ಮೃತನಾದ ಪುತ್ರನ ಪೂರ್ವ ಮೃತ ಪುತ್ರನ ವಿಧವೆ.

### II ನೇ ವರ್ಗ

I. ತಂದೆ

II. (1) ಪುತ್ರನ ಪುತ್ರಿಯ ಪುತ್ರ (2) ಪುತ್ರನ ಪುತ್ರಿಯ ಪುತ್ರಿ (3) ಅಣ್ಣ-ತಮ್ಮ (4) ಅಕ್ಕ-ತಂಗಿ.

III. (1) ಪುತ್ರಿಯ ಪುತ್ರನ ಪುತ್ರ ; (2) ಪುತ್ರಿಯ ಪುತ್ರನ ಪುತ್ರಿ ; (3) ಪುತ್ರಿಯ ಪುತ್ರಿಯ ಪುತ್ರ (4) ಪುತ್ರಿಯ ಪುತ್ರಿಯ ಪುತ್ರಿ.

IV. (1) ಅಣ್ಣ-ತಮ್ಮನ ಪುತ್ರ ; (2) ಅಕ್ಕ-ತಂಗಿಯ ಪುತ್ರ ;
(3) ಅಣ್ಣ-ತಮ್ಮನ ಪುತ್ರಿ ; (4) ಅಕ್ಕ-ತಂಗಿಯ ಪುತ್ರಿ.

V. ತಂದೆಯ ತಂದೆ ; ತಂದೆಯ ತಾಯಿ.

VI. ತಂದೆಯ ವಿಧವೆ ; ಅಣ್ಣ-ತಮ್ಮನ ವಿಧವೆ.

VII. ತಂದೆಯ ಅಣ್ಣ-ತಮ್ಮ ; ತಂದೆಯ ಅಕ್ಕ-ತಂಗಿ.

VIII. ತಾಯಿಯ ತಂದೆ ; ತಾಯಿಯ ತಾಯಿ.

IX. ತಾಯಿಯ ಅಣ್ಣ-ತಮ್ಮ ; ತಾಯಿಯ ಅಕ್ಕ-ತಂಗಿ.

ವಿವರಣೆ.— ಈ ಅನುಸೂಚಿಯಲ್ಲಿ ಅಣ್ಣ-ತಮ್ಮನಿಗೆ ಅಥವಾ ಅಕ್ಕ-ತಂಗಿಗೆ ಇರುವ ಉಲ್ಲೇಖಗಳು ಏಕೋದರ ರಕ್ತದ ಅಣ್ಣ-ತಮ್ಮನಿಗೆ ಅಥವಾ ಅಕ್ಕ-ತಂಗಿಗೆ ಇರುವ ಉಲ್ಲೇಖಗಳನ್ನು ಒಳಗೊಳ್ಳುವುದಿಲ್ಲ.

* * *